೬. ಶಾಸನ ರಚನೆ

(ಅ) ಪರ್ಯಾಲೋಚನಾ ಪ್ರಸ್ತಾವ.

(ಅ) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, ೨೦೦೧ ಪರ್ಯಾಲೋಚನಾ ಪ್ರಸ್ತಾವ.

+ ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, "2001ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಈ ವಿಧೇಯಕವನ್ನು ಮಂಡಿಸತಕ್ಕಂಥ ಕೆಲವು ಸಂದರ್ಭಗಳು ನಮಗೆ ಒದಗಿ ಬಂದಿವೆ. ವಿಶೇಷವಾಗಿ ಈ ಕಾನೂನು ಜಾರಿಗೆ ಬಂದಾದ ಮೇಲೆ ಜಾತಿ ಪತ್ರಗಳನ್ನು ಮತ್ತು ಆದಾಯ ಪತ್ರಗಳನ್ನು ಪಡೆಯುವುದಕ್ಕೆ ತಹಶೀಲ್ದಾರ್‌ಗಳಿಗೆ ಅಧಿಕಾರವನ್ನು ನೀಡಲಾಗಿತ್ತು. ಅದೇ ರೀತಿ ವೆರಿಫಿಕೇಷನ್ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಧಿ ಕಾರಿಗಳಿಗೆ ನೀಡಲಾಗಿತ್ತು. ಇದೆಲ್ಲಾ ಇದ್ದರೂ ಕೂಡ ಅನೇಕ ಕಡೆಗಳಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಪಡೆಯತಕ್ಕಂಥ ಜನರು, ವಿಷಯಗಳನ್ನು ಮುಚ್ಚಿ ಹಾಕಿ, ಸುಳ್ಳು ದಾಖಲೆಗಳನ್ನು ನೀಡಿ, ಸುಳ್ಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆಯತಕ್ಕಂಥ ಪ್ರವೃತ್ತಿ ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ತಡೆಗಟ್ಟ ಬೇಕಾದಂತಹ ಅಗತ್ಯ ಇದೆ. ಯಾವ ವರ್ಗದ ಜನರಿಗೆ ಈ ಮೀಸಲಾತಿಯ ಪ್ರಯೋಜನ ದಕ್ಕಬೇಕೋ, ಅವರಿಗೆ ದಕ್ಕಬೇಕಾದರೆ ಇದನ್ನು ದುರುಪಯೋಗಪಡಿಸಿಕೊಳ್ಳತಕ್ಕಂಥ ಜನರ ಮೇಲೆ ನಾವು ನಿರ್ಬಂಧವನ್ನು ಮತ್ತು ಕಠಿಣವಾದಂತಹ ಕ್ರಮವನ್ನು ಕೈಗೊಳ್ಳಲೇ ಬೇಕಾಗುತ್ತದೆ. ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡುವಂತಹ ಅಧಿಕಾರಿಗಳು ಯಾರಿದ್ದಾರೆ, ಅವರು ಪ್ರಾಮಾಣಿಕವಾಗಿ ಜವಾಬ್ದಾರಿಯುತ ರೀತಿಯಿಂದ ನೀಡಬೇಕು. ಯಾರು ಇದರಲ್ಲಿ ತಪ್ಪು ಮಾಡುತ್ತಾರೋ ಅವರನ್ನೂ ಕೂಡ ಈ ತಪ್ಪಿಗೆ ಹೊಣೆಗಾರರನ್ನಾಗಿ ಮಾಡಲೇಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಇವತ್ತು ಇದೆ. ಆ ಕಾರಣಕ್ಕಾಗಿ ಈ ತಿದ್ದುಪಡಿಗಳನ್ನು ಸದನದ ಮುಂದೆ ನಾನು ತಂದಿದ್ದೇನೆ. ಮೊದಲನೆಯದಾಗಿ, ಸೆಕ್ಷನ್ (4)ಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಅದು ಏನೆಂದರೆ, ತಹಸೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ

ತೀರ್ಮಾನ ಮಾಡತಕ್ಕಂಥ ಸಂದರ್ಭದಲ್ಲಿ ಸಿವಿಲ್ ಕೋರ್ಟಿಗೆ ಏನು ಹಕ್ಕಿದೆಯೋ, ಆ ಸಿವಿಲ್ ಕೋರ್ಟಿಗೆ ಇರತಕ್ಕಂಥ ಹಕ್ಕನ್ನು ಇವರಿಗೆ ಕೊಟ್ಟಿದೆ. ಅವರು ಯಾರನ್ನಾದರೂ ಸಮನ್ ಮಾಡಬಹುದು, ದಾಖಲಾತಿಗಳನ್ನು ಕೇಳಬಹುದು. ಸಿವಿಲ್ ಕೋರ್ಟಿಗೆ ಇರುವ ಅಧಿಕಾರವನ್ನು ಇವರು ಚಲಾಯಿಸಿದರೆ, ಆಗ ಒಂದು ಕ್ವಾಸಿ-ಜ್ಯುಡಿಷಿಯಲ್ ಪ್ರೊಸೀಡಿಂಗ್ಸ್‌ಗೆ ಬೇಕಾದಂತಹ ಪ್ರಾಮುಖ್ಯತೆ ಬರುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಇವತ್ತು ನಾವು ಸೇರಿಸಿದ್ದೇವೆ. ಜಿಲ್ಲಾಧಿಕಾರಿಗಳು ವೆರಿಫಿಕೇಷನ್ ಮಾಡುವಾಗ ಕೂಡ ಈ ಅಧಿಕಾರವನ್ನು ಅವರಿಗೆ ನೀಡಲಾಗಿದೆ. ಯಾರು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆಯುತ್ತಾರೋ ಮತ್ತು ಯಾರು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ನೀಡುತ್ತಾರೋ ಇಬ್ಬರೂ ಕೂಡ ಶಿಕ್ಷೆಗೆ ಮತ್ತು ದಂಡಕ್ಕೆ ಗುರಿಯಾಗುತ್ತಾರೆ. ಅಂತಹ ಒಂದು ತಿದ್ದುಪಡಿಯನ್ನು ನಾವು ಇಲ್ಲಿ ತಂದಿದ್ದೇವೆ. ಜಾತಿ ಪ್ರಮಾಣ ಪತ್ರವನ್ನು ಪಡೆಯತಕ್ಕಂಥ ಕಾಲದಲ್ಲಿ ಅರ್ಜಿದಾರ ಒಬ್ಬನೇ ಇರುತ್ತಾನೆ, ಪ್ರತಿವಾದಿ ಇರುವುದಿಲ್ಲ. ಅವನು ಯಾವುದೋ ಕಾರಣ ಹೇಳಿ ಅದನ್ನು ಪಡೆದುಕೊಂಡು ಬಿಡಬಹುದು. ಅದರ ಪ್ರಯೋಜನವನ್ನೂ ಕೂಡ ಅನುಭವಿಸಬಹುದು. ಇದನ್ನು ತಪ್ಪಾಗಿ ನೀಡಿದರೆ ಅದನ್ನು ಪ್ರಶ್ನೆ ಮಾಡಲಿಕ್ಕೆ ಯಾರಿಗೂ ಅವಕಾಶ ಇರುವುದಿಲ್ಲ. ಆದ್ದರಿಂದ ಈ ಜಾತಿ ಪ್ರಮಾಣ ಪತ್ರವನ್ನು ನೀಡತಕ್ಕಂಥ ಅಧಿಕಾರಿ ಇನ್‌ಟೆನ್‌ಷನಲಿ ಸುಳ್ಳಾಗಿ ನೀಡಿದರೆ ಅವನನ್ನೂ ಕೂಡ ಶಿಕ್ಷೆಗೆ ಗುರಿ ಮಾಡತಕ್ಕಂಥ ಅವಕಾಶ ನೀಡುವ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಕಾರಣವೇನೆಂದರೆ, ಅನೇಕ ಕಡೆಗಳಲ್ಲಿ ಕಣ್ಣುಮುಚ್ಚಿಕೊಂಡು ಜಾತಿ ಪ್ರಮಾಣ ಪತ್ರವನ್ನು ನೀಡತಕ್ಕಂಥ ಒಂದು ಪ್ರವೃತ್ತಿ ಬೆಳೆದು ಬಿಟ್ಟಿದೆ. ಇದರಿಂದಾಗಿ ಕೆಲವರು ಇದನ್ನು ವ್ಯಾಪಕವಾಗಿ ದುರುಪಯೋಗ ಪಡಿಸಿಕೊಂಡ ಅನೇಕ ಪ್ರಕರಣಗಳು ಇವತ್ತು ಬೆಳಕಿಗೆ ಬಂದಿವೆ. ಇದನ್ನು ತಡೆಹಿಡಿಯಲೇಬೇಕು. ಜಾತಿ ಪ್ರಮಾಣ ಪತ್ರವನ್ನು ನೀಡತಕ್ಕಂಥ ಅಧಿಕಾರಿ ಜ್ಯುಡಿಷಿಯಸ್ಸಾಗಿ ಮತ್ತು ಕೇರ್‌ಫುಲ್ಲಾಗಿ ಇದನ್ನು ವಿಚಾರಣೆ ಮಾಡಿ ಅದನ್ನು ನೀಡಬೇಕಾದಂತಹ ಜವಾಬ್ದಾರಿಯನ್ನು ಅವನ ತಲೆಯ ಮೇಲೆ ಹಾಕಬೇಕಾದರೆ ಅವನಿಗೂ ಕೂಡ ಶಿಕ್ಷೆ ಕಾದಿದೆ ಎನ್ನುವ ಮನವರಿಕೆಯಾಗಬೇಕಾದರೆ ಇಂತಹ ಒಂದು ಕಠಿಣ ಕ್ರಮ ಅನಿವಾರ್ಯ. ಆ ಕಾರಣಕ್ಕಾಗಿ ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಜಾತಿ ಪ್ರಮಾಣ ಪತ್ರಗಳನ್ನು ಮಕ್ಕಳ ಪರವಾಗಿ ತಂದೆ ತಾಯಿಗಳು ಪಡೆದುಕೊಳ್ಳುತ್ತಾರೆ. ಮಕ್ಕಳು ಮೈನರ್ ಇರುವುದರಿಂದ ಅವರ ಮೇಲೆ ನಾವು ಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲ. ಯಾವ ಪೋಷಕರು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿ ಸಲ್ಲಿಸುತ್ತಾರೋ ಅವರನ್ನು ನಾವು ಅಬೇಟರ್ಸ್ ಎಂದು ಪರಿಗಣಿಸಿ ಈ ರೀತಿ ಪ್ರೋತ್ಸಾಹ ನೀಡತಕ್ಕವರನ್ನೂ ಕೂಡ ಈ ಅಪರಾಧದ ವ್ಯಾಪ್ತಿಯಲ್ಲಿ ತರತಕ್ಕಂಥ ತಿದ್ದುಪಡಿಯನ್ನು 6 ಬಿ-ಗೆ ನಾವು ತಂದಿದ್ದೇವೆ. ಈ ಎಲ್ಲಾ ಅಪರಾಧಗಳನ್ನೂ ಕೂಡ ಸಮರಿ ಟ್ರಯಲ್ ಆಗಿ ಡಿಸ್ಪೋಸ್ ಮಾಡುವುದಕ್ಕೆ 6ಸಿ-ಯನ್ನು ನಾವು ಅಳವಡಿಸಿಕೊಂಡಿದ್ದೇವೆ. 6ಡಿ-ಯಲ್ಲಿ

ಯಾವುದೇ ಸಿವಿಲ್ ಕೋರ್ಟ್ ಜ್ಯುರಿಸ್‌ಡಿಕ್ಷನ್ ಇಲ್ಲದೇ ಇದರಲ್ಲಿ ಪ್ರವೇಶ ಮಾಡದ ರೀತಿಯಲ್ಲಿ ನಿರ್ಬಂಧ ವಿಧಿಸಿದ್ದೇವೆ. ಸೆಕ್ಷನ್ 6ಇ ಪ್ರಕಾರ ಯಾರಾದರೂ ಸುಳ್ಳು ಪ್ರಮಾಣ ಪತ್ರಗಳಿಂದ ಯಾವುದಾದರೂ ಡಿಗ್ರಿ ಮತ್ತು ಡಿಪ್ಲೊಮಾ ಪದವಿಗಳನ್ನು ಪಡೆದಿದ್ದರೆ ಅವುಗಳನ್ನು ರದ್ದು ಪಡಿಸುವುದಕ್ಕೆ ಬೇಕಾದಂತಹ ಅಧಿಕಾರ ಸಿಗುವಂತೆ ತಿದ್ದುಪಡಿ ತಂದಿದ್ದೇವೆ. ಸೆಕ್ಷನ್ 6ಎಫ್ ಪ್ರಕಾರ ಈ ಒಂದು ಕಾನೂನು ಎಲ್ಲಾ ಕಾನೂನನ್ನು ಮೀರಿ ನಿಲ್ಲತಕ್ಕಂಥ ವ್ಯಾಪಕವಾದಂತಹ ಅಧಿಕಾರವನ್ನು ಒದಗಿಸಿಕೊಟ್ಟಿದ್ದೇವೆ. ಇದರ ಉದ್ದೇಶ ಏನೆಂದರೆ, ಪ್ರಾಮಾಣಿಕವಾಗಿ ಯಾರು ಯಾವ ಜಾತಿಗೆ ಸೇರಿರುತ್ತಾರೋ, ಅವರು ಆ ಜಾತಿಗೆ ಸಂಬಂಧಪಟ್ಟಂತಹ ಜಾತಿ ಪ್ರಮಾಣ ಪತ್ರಗಳನ್ನೇ ಪಡೆಯಬೇಕು. ಜಾತಿ ಪ್ರಮಾಣ ಪತ್ರವನ್ನು ನೀಡತಕ್ಕಂಥ ಅಧಿಕಾರಿ, ಜಾತಿ ಪ್ರಮಾಣ ಪತ್ರ ನೀಡುವಾಗ ಅವನು ಪ್ರಾಮಾಣಿಕವಾಗಿ ಮತ್ತು ಜ್ಯುಡಿಷಿಯಸ್ಸಾಗಿ ತೀರ್ಮಾನ ಮಾಡುವ ಸಲುವಾಗಿ ಅವನ ತಲೆಯ ಮೇಲೂ ಕೂಡ ಒಂದು ಅಲಗಿನ ಕತ್ತಿ ನೇತಾಡಬೇಕು ಎನ್ನುವುದಕ್ಕೊಂದು ನಿರ್ಬಂಧ ಇಡತಕ್ಕಂಥಾದ್ದನ್ನು ನಾವು ಮಾಡಿದ್ದೇವೆ. ಹೀಗೆ ಇದ್ದುದರಲ್ಲಿ ಈ ಕಾನೂನನ್ನು ಸ್ವಲ್ಪ ವ್ಯವಸ್ಥಿತವಾಗಿ ಮತ್ತು ನಿಷ್ಠೂರವಾಗಿ ಜಾರಿಗೆ ತರುವುದಕ್ಕೆ ಅನುಕೂಲ ಆಗುವಂತಹ ಕೆಲವು ತಿದ್ದುಪಡಿಗಳನ್ನು ಒಳಗೊಂಡ ವಿಧೇಯಕವನ್ನು ತಂದಿದ್ದೇನೆ. ದಯವಿಟ್ಟು ಮಾನ್ಯ ಸದಸ್ಯರುಗಳು ಇದಕ್ಕೆ ಒಪ್ಪಿಗೆಯನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ವಿಧೇಯಕವನ್ನು ಈಗ ತಾನೇ ಮಂಡನೆ ಮಾಡಿದ್ದಾರೆ. ಖೊಟ್ಟಿ ಜಾತಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವಂಥಾದ್ದು ಸಾಕಷ್ಟು ಕಡೆ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕೊಂದು ಕಡಿವಾಣ ಹಾಕುವ ಸಲುವಾಗಿ ತಾವೇನು ಸದುದ್ದೇಶದಿಂದ ಈ ತಿದ್ದುಪಡಿಗಳನ್ನು ತಂದಿದ್ದೀರೋ ಅದು ಬಹಳ ಒಳ್ಳೆಯದು. ಸೆಕ್ಷನ್ 6ಡಿ ಪ್ರಕಾರ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಯಾವ ಉದ್ದೇಶದಿಂದ ತೆಗೆಯಲಾಗಿದೆ ಎಂಬುದು ನನಗೆ ಗೊತ್ತಾಗಲಿಲ್ಲ. ಸಿವಿಲ್ ನ್ಯಾಯಾಲಯಗಳ ಅಧಿಕಾರವನ್ನು ಇವತ್ತು ನೀವು ತಹಸೀಲ್ದಾರ್‌ಗೆ ಕೊಡಲಿಕ್ಕೆ ಹೊರಟಿದ್ದೀರಿ. ಆ ಅರ್ಥ ಬರುವ ರೀತಿಯಲ್ಲೇ ಈ ತಿದ್ದುಪಡಿ ಇದೆ. "Tahsildar and Verification Committee to exercise the powers of the Civil Court." ಇಲ್ಲಿ ತಹಸೀಲ್ದಾರ್ ತಪ್ಪು ಮಾಡಿದರೆ, ಆ ಕಮಿಟಿ ತಪ್ಪು ಮಾಡಿದರೆ, ಅದನ್ನು ಚಾಲೆಂಜ್ ಮಾಡುವುದಕ್ಕೆ ಯಾವುದಾದರೂ ಒಂದು ಫೋರಂ ಬೇಕಾಗುತ್ತದೆ. ಈಗ ನೀವು ಸಿವಿಲ್ ಕೋರ್ಟ್‌ನ ಜ್ಯುರಿಸ್‌ಡಿಕ್ಷನ್ ಅನ್ನು ತೆಗೆದು ಬಿಟ್ಟಿದ್ದೀರಿ. ಅಪೀಲ್ ಮಾಡಿಕೊಳ್ಳಲು ಡೆಪ್ಯುಟಿ ಕಮೀಷನರ್ ಹಂತದಲ್ಲಿ ಅವಕಾಶ ಇದೆಯೋ ಇಲ್ಲವೋ ಎಂಬುದೂ ಕೂಡ ಇಲ್ಲಿ ಕ್ಲಿಯರಾಗಿಲ್ಲ. ಇದರ ಪ್ರಕಾರ ಯಾರಿಗಾದರೂ ಒಬ್ಬರಿಗೆ ಅನ್ಯಾಯವಾದರೆ ಅವನು ಅದರ ವಿರುದ್ಧ ಹೈಕೋರ್ಟ್‌ಗೆ ರಿಟ್ ಪಿಟಿಷನ್

ಸಲ್ಲಿಸಬೇಕಾಗುತ್ತದೆ. ಇದು ಬಹಳ ಕಾಸ್ಲಿ ಅಫೇರ್ ಆಗುತ್ತದೆ. ಆದುದರಿಂದ ತಿದ್ದುಪಡಿ ಮಾಡುವುದರ ಮೂಲಕ ಸಿವಿಲ್ ನ್ಯಾಯಾಲಯದ ಜ್ಯುರಿಸ್‌ಡಿಕ್ಷನ್ ಅನ್ನು ತೆಗೆದು ಹಾಕುವುದು ಸರಿಯಲ್ಲವೆಂದು ನನ್ನ ವಾದವಾಗಿದೆ. ಅದರ ಬಗ್ಗೆ ಮಾನ್ಯ ಸಚಿವರು ರೀ-ಕನ್ಸಿಡರ್ ಮಾಡಬೇಕು. ಕಮಿಟಿಯಲ್ಲಿ ಯಾರು ಇರುತ್ತಾರೆ ಎಂಬುದರ ಬಗ್ಗೆ ಇದರಲ್ಲಿ ಕ್ಲಿಯರ್ ಆಗಿ ಹೇಳಲಾಗಿಲ್ಲ. ನಾಳೆ ಯಾರಾದರೂ ನಾಮಿನೇಟೆಡ್ ಆದವರು ಕಮಿಟಿಗೆ ಬಂದರೆ, ಆ ಕಮಿಟಿ ಹೇಗೆ ಇರುತ್ತದೆ ಎಂಬುದು ಗೊತ್ತಾಗುತ್ತದೆ. ಅದರ ಸಲುವಾಗಿ ಮತ್ತು ತಹಸೀಲ್ದಾರ್ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಮುಂದಿನ ಚರ್ಚೆಗೆ ಅನುಕೂಲವಾಗಲಿ ಎಂದು ನಾನು ಆಗಲೇ ಸ್ವಲ್ಪ ಮಾತನಾಡುವುದನ್ನು ಮರೆತು ಬಿಟ್ಟೆ. ಸೆಕ್ಷನ್ '4 ಎಫ್' ಒಂದು ಮಾಡಿದ್ದೇವೆ, ಇದರಲ್ಲಿ

"The Deputy Commissioner may at any time either suo-moto or on an application made to him within the prescribed period, call for and examine the records..."

ಜೊತೆಗೆ ಏನಾಗಿದೆ ಎಂದರೆ ತಹಶೀಲ್ದಾರರು ಕೊಡುವ ತೀರ್ಮಾನದ ವಿರುದ್ಧ ಅಪೀಲ್ ಹೋಗುವುದಕ್ಕೆ ಅಸಿಸ್ಟೆಂಟ್ ಕಮಿಷನರ್‌ಗೆ ಪ್ರಾವಿಷನ್ ಇದೆ. ಡೆಪ್ಯುಟಿ ಕಮಿಷನರ್‌ರವರು ವೆರಿಫಿಕೇಷನ್ ಕಮಿಟಿಯವರು ಕೊಟ್ಟಂತಹ ತೀರ್ಮಾನದ ವಿರುದ್ಧ ಅಪೀಲು ಹೋಗುವುದಕ್ಕೆ ಡಿವಿಷನಲ್ ಕಮಿಷನರ್‌ಗೆ ಅವಕಾಶವಿದೆ. ಅಪೀಲ್ ಪ್ರಾವಿಷನ್ ಇರುವುದರಿಂದ ಸಿವಿಲ್ ಕೋರ್ಟ್‌ನ ವ್ಯಾಪ್ತಿಗೆ ಇದನ್ನು ಹೊರತು ಪಡಿಸಿದ್ದಾರೆ. ಜೊತೆಗೆ ಜಾತಿ ಪ್ರಮಾಣ ಪತ್ರ ಪಡೆಯುವಾಗ ಅರ್ಜಿದಾರರು ಒಪ್ಪದೆ ಇರುವುದನ್ನು ಪ್ರಶ್ನೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಸರಿ ತಪ್ಪು ಎಂದು ಹೇಳುವ ವೆರಿಫಿಕೇಷನ್ ಇರುವುದಿಲ್ಲ. ಇದರಿಂದ ಜಮೀನ್ದಾರರು ಅಥವಾ ಸಾರ್ವಜನಿಕರು ಯಾರು ಬೇಕಾದರೂ ಕೂಡ ಇದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೆ ತಹಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರ್ ಅಪೀಲ್ ಇಲ್ಲಿ ತೀರ್ಮಾನ ಮಾಡುವಾಗ, ಅಪೀಲ್ ಹೋಗುವವರು ಒಬ್ಬರೇ ಹೋಗುತ್ತಾರೆ. ಎದುರು ಪಾರ್ಟಿ ಇರುವುದಿಲ್ಲ. ಸರ್ಕಾರವೇ ಎದುರು ಪಾರ್ಟಿ ಇರುತ್ತದೆ. ಅಲ್ಲಿ ವಾದ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ ಜಿಲ್ಲಾಧಿಕಾರಿಗಳು ಯಾವುದೇ ಸಂದರ್ಭದಲ್ಲಿ ತಹಶೀಲ್ದಾರ್ ಆಗಿರಲಿ, ಅಸಿಸ್ಟೆಂಟ್ ಕಮಿಷನರ್ ಆಗಿರಲಿ, ತೀರ್ಮಾನ ಮಾಡಿರುವುದು ನೇರವಾಗಿ ಸುದ್ದಿ ಮುಟ್ಟಿದರೂ ವಿಚಾರ ಮಾಡುವುದಕ್ಕೆ ಅವಕಾಶವಿದೆ. ಎರಡು ಸಂದರ್ಭಗಳಲ್ಲೂ ಅಪೀಲ್‌ಗೆ ಅವಕಾಶವಿರುವುದರಿಂದ ಇದನ್ನು ಸಿವಿಲ್ ಕೋರ್ಟ್ ವ್ಯಾಪ್ತಿಯಿಂದ ಹೊರತು ಪಡಿಸುವುದಕ್ಕೆ ನಾವು ಮೂಲತಃ ಆಲೋಚನೆ ಮಾಡುವುದಕ್ಕೆ ಮಾಡಿರುವ ವಿಚಾರ.

SRI JAGADISH SHETTAR: Sec. 6F: Act to override other laws:

"The provisions of this Act shall have effect, notwithstanding anything inconsistent therewith contained in any other law for the time being in force."

SRI KAGODU THIMMAPPA: 'if it is inconsistent with the provisions of this law'.

ಅನುಸೂಚಿತ ಜಾತಿ ಮತ್ತು ವರ್ಗಗಳ ಬಗ್ಗೆ ನಿರ್ಧರಿಸುವ ವ್ಯಾಪ್ತಿ ಕೇಂದ್ರ ಸರ್ಕಾರಕ್ಕೆ ಸೇರುತ್ತದೆ. ಹೀಗಿರುವುದರಿಂದ ನೀವು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಯಾರಾದರೂ ವಯಲೇಟ್ ಮಾಡಿದರೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಶಿಕ್ಷೆ ಕೊಡುವುದು. ಐಪಿಸಿಯಾಗಲಿ, ಕ್ರಿಮಿನಲ್ ಪ್ರೊಸೀಜರ್ ಕೋಡ್ ಆಗಲಿ, ಅಲ್ಲಿ ಯಾವುದೋ ಒಂದು ಪ್ರೊಸೀಜರ್, ಯಾವುದೋ ಸೆಕ್ಷನ್, ಯಾವುದೋ ಅಲ್ಲಿರುವ ವರ್ಡಿಂಗ್ಸ್ ಇದು ಓವರ್ ರೈಡ್ ಆಗುತ್ತದೆಯೇ, ಸಿವಿಲ್ ಪ್ರೊಸೀಜರ್ ಕೋಡ್, ಐಪಿಸಿ ಓವರ್ ರೈಡ್ ಹೇಗಾಗುತ್ತದೆ, ಇದಕ್ಕೆ ಒಂದು ಕಾಂಟ್ರಡಿಕ್ಷನ್ ಆಗುವ ಅವಕಾಶವಿದೆ. ಅದನ್ನು ನಾವು ಇನ್ನು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ನಾಳೆ ಇಲ್ಲಿ ಪನಿಶ್‌ಮೆಂಟ್ ಕೊಡಬೇಕಾದರೆ ನೀವು ಯಾರ ಮೇಲಾದರೂ ಕ್ರಿಮಿನಲ್ ಕೇಸ್ ಫೈಲ್ ಮಾಡಬೇಕಾದರೆ, ನೀವು ಅಪ್ರೋಚ್ ಆಗುವ ಕ್ರಿಮಿನಲ್ ಕೋಡ್ ಪ್ರೊಸೀಜರ್ ಪ್ರಕಾರ ಐಪಿಸಿ ಪ್ರಕಾರ ಅವರಿಗೆ ಶಿಕ್ಷೆ ಆಗಬೇಕಾಗುತ್ತದೆ. ಆಗ ಅಲ್ಲಿ ಇರುವ ಪ್ರಾವಿಷನ್‌ಗೆ, ಈ ಪ್ರಾವಿಷನ್‌ಗೆ ಏನಾದರೂ ಕಾಂಟ್ರಡಿಕ್ಷನ್ ಬಂದರೆ......

SRI KAGODU THIMMAPPA: See 6C: Offence to be tried summarily "Notwithstanding anything contained in the Code of Criminial Procedure, 1973 (Central Act, 2 of 1974) any offence punishable under this Act, may be tried summarily by a Judicial Magistrate of the First Class."

ಶ್ರೀ ಜಗದೀಶ್ ಶೆಟ್ಟರ್: ನಾಳೆ ಇದು ಮಾಡಿದ ಮೇಲೆ ಕೋರ್ಟ್‌ನಲ್ಲಿ ಇದು ಸ್ಟ್ಯಾಂಡ್ ಆಗದೇ ಹೋಗಬಹುದು. ಓವರ್ ರೈಡಿಂಗ್ ಎಫೆಕ್ಟ್ ಎಂದು ಬರೆದಿದ್ದೀರಿ, ಇದು ನಾಳೆ ಸ್ಟ್ಯಾಂಡ್ ಆಗದೆ ಹೋಗಬಹುದು. ನಾಳೆ ಯಾರಾದರೂ ಛಾಲೆಂಜ್ ಮಾಡಿದರೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಐಪಿಸಿ ಇದು ಕಾಂಟ್ರಡಿಕ್ಷನ್ ಆಗುವ ಅವಕಾಶ ಇದೆ. ಇದರ ಬಗ್ಗೆ ನೀವು ಯೋಚನೆ ಮಾಡಿ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಇದರಲ್ಲಿ ಕೆಲವು ವಿಚಾರಗಳನ್ನು ಸ್ವಾಗತ ಮಾಡಬಹುದು. ಕೆಲವು ವಿಚಾರಗಳನ್ನು ಪುನರ್ ಪರಿಶೀಲನೆ ಮಾಡತಕ್ಕಂತಹ

ಅವಶ್ಯಕತೆ ಇದೆ. ಕ್ಯಾಸ್ಟ್ ಸರ್ಟಿಫಿಕೇಟ್ ಇಷ್ಯೂ ಮಾಡುವ ವಿಚಾರದಲ್ಲಿ ನಮ್ಮದು ಭಿನ್ನಾಭಿಪ್ರಾಯ ಇಲ್ಲ. ಇನ್‌ಕಮ್ ಸರ್ಟಿಫಿಕೇಟ್ ಕೊಡುವುದು ಸೇರಿಸಿರುವುದರಿಂದ ಇನ್‌ಕಮ್ ಸರ್ಟಿಫಿಕೇಟ್ ಸ್ಟ್ರೀಮ್‌ಲೈನ್ ಆಗದೆ ಆ್ಯಕ್ಟ್‌ನಲ್ಲಿ ತರುವುದು ಸೂಕ್ತ ಅಲ್ಲ. ಮೊದಲು ಸ್ಟ್ರೀಮ್‌ಲೈನ್ ಮಾಡಿ. ಇನ್‌ಕಮ್ ಸರ್ಟಿಫಿಕೇಟ್ ಯಾವ ರೀತಿ ಕೊಡಬೇಕೆಂದು, ಮೂಲಭೂತವಾಗಿ ಕೊಡತಕ್ಕಂಥದ್ದು ಹೇಗೆ, ಯಾರು ಎಲ್ಲಿ, ಅದಾದ ಮೇಲೆ ಇದನ್ನು ತರಬೇಕಾಗಿತ್ತು, ಅದು ಇಲ್ಲದೆ ಇದು ಯಾವುದೂ ಸರಿಯಲ್ಲ. ಇದನ್ನು ತಕ್ಷಣಕ್ಕೆ ಡಿಲೀಟ್ ಮಾಡಬೇಕು. ಎರಡನೆಯದಾಗಿ ಟೈಮ್ ಲಿಮಿಟ್ ಕೊಡಬೇಕು. ಎಷ್ಟು ದಿನದಲ್ಲಿ ಸಿವಿಲ್ ಕೋರ್ಟಿನಿಂದ ಹೊರಗೆ ತರುವುದು, ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಮತ್ತು ಡೆಪ್ಯುಟಿ ಕಮಿಷನರ್ ಆದ ಮೇಲೆ ಇನ್ನೊಬ್ಬರಿಗೆ ಕೊಡತಕ್ಕಂಥಾದ್ದು ಬರೆದಿದ್ದೇವೆ, ಇದನ್ನು ಎಷ್ಟು ದಿನದಲ್ಲಿ ತೀರ್ಮಾನ ಮಾಡಬೇಕೆಂದು ಟೈಮ್ ಲಿಮಿಟ್ ಕೊಡಬೇಕು. Let it have a statutory power. ರೂಲ್‌ನಲ್ಲಿ ತರುವುದಕ್ಕಿಂತ ಇದರಲ್ಲಿ ತಂದು ಬಿಡಿ.

See 6E: Cancellation of degree etc: Notwithstanding anything contained in any other law, any degree, diploma or any other education qualification acquired by a person after securing admission in any educational institution on the basis of a false caste certificate..

Here you insert "and also secured appointment in Government office". Not only securing admission in any educational institution, but also securing Government appointments.

+ ಶ್ರೀ ಕೆ.ಬಿ.ಮಲ್ಲಿಕಾರ್ಜುನ(ಬಿರೂರು): ಮಾನ್ಯ ಸಭಾಧ್ಯಕ್ಷರೆ, ತಿದ್ದುಪಡಿಯನ್ನು ಸ್ವಾಗತ ಮಾಡುತ್ತಾ 'ನಾಲ್ಕು-ಎಫ್'ನಲ್ಲಿ 'ಯಾವುದೇ ಸಮಯದಲ್ಲಿ' ಎಂದು ಬಿನಿದೆ, ಅದನ್ನು ರೂಲ್ಸ್‌ನಲ್ಲಿ ತರುತ್ತೇವೆಂದು ಹೇಳಿದ್ದೀರಿ. ಅದು ತಪ್ಪಾಗುವುತ್ತದೆ. ಆ್ಯಕ್ಟ್‌ನಲ್ಲಿ ನಾಲ್ಕು-ಎಫ್‌ನಲ್ಲಿ ಯಾವುದೇ ಸಮಯದಲ್ಲಿ ಎನ್ನುವುದನ್ನು ತೆಗೆದು 'ನಿಗದಿತ ಸಮಯ' ಎಂದು ಇಟ್ಟುಕೊಳ್ಳುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಆದಾಯದ ಬಗ್ಗೆ ಸರ್ಕಾರ ಯಾವುದೇ ಮಾನದಂಡವನ್ನು ಹೊರಿಸಿಲ್ಲ. ಯಾವ ಜಮೀನಿಗೆ ಯಾವುದೇ ವ್ಯವಸಾಯ ಮಾಡತಕ್ಕಂತಹ ವ್ಯಕ್ತಿಗಳ ಆದಾಯ ನಿಗದಿಪಡಿಸುವುದು ಇವರ ಕರ್ತವ್ಯ. ನೀವು ಇದರಲ್ಲಿ ಆದಾಯ ಸರ್ಟಿಫಿಕೇಟ್ ತೆಗೆಯಬೇಕಾಗುತ್ತದೆ. ಇಲ್ಲವಾದರೆ ಯಾವ ಯಾವ ಜಮೀನಿನಲ್ಲಿ ಎಷ್ಟೆಷ್ಟು, ಯಾವ ಯಾವ ಕಾಲಕ್ಕೆ ನೀವು ಆದೇಶವನ್ನು ಇಂತಿಂಥ ಜಮೀನಿಗೆ ಎಷ್ಟೆಷ್ಟು ಆದಾಯ ಬರುತ್ತದೆ ಎಂದು ಸರ್ಕಾರದಿಂದ ಆದೇಶ ಹೊರಡಿಸಿದರೆ ಸಾಧ್ಯವಾಗುತ್ತದೆ. ಅಡಿಕೆ ತೋಟ 20 ಎಕರೆ ಇರುವವರೂ ಕೂಡ ಸಾವಿರ ರೂಪಾಯಿಗಳ ಆದಾಯ ತೋರಿಸುತ್ತಾರೆ. ಆಗ ತಹಸೀಲ್ದಾರ್‌ರವರಿಗೆ ಬಹಳ

ಎಂಬ್ರಾಸಿಂಗ್ ಪೊಸಿಷನ್ ಬರುತ್ತದೆ. ಇದನ್ನು ನಿಗದಿಪಡಿಸಲಿಕ್ಕೆ ಸರ್ಕಾರದಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ. ಅತಿ ಮುಖ್ಯವಾದ ವಿಚಾರ '5 ಬಿ'ಯಲ್ಲಿ ಒಂದು ಮಾತು ಹೇಳಿದ್ದೀರಿ. '4 ಇ' ಯಲ್ಲಿ ಸಿವಿಲ್ ಕೋರ್ಟಿನ ಅಧಿಕಾರವನ್ನು ತಹಶೀಲ್ದಾರ್‌ಗೆ ಕೊಟ್ಟಿದ್ದೀರಿ. '5ಬಿ'ಯಲ್ಲಿ ಒಂದು ಶೆಲ್ಟರ್ ಕೊಟ್ಟಿದ್ದೀರಿ. ಇದನ್ನು ಉದ್ದೇಶ ಪೂರ್ವಕವಾಗಿ' ಎಂದು ಹೇಳಿದ್ದೀರಿ. ಯಾರಾದರೂ ನಾನು ಉದ್ದೇಶ ಪೂರ್ವಕವಾಗಿ ಕೊಟ್ಟಿಲ್ಲ, ನಾನು ಅನಾಯಾಸವಾಗಿ ಕೊಟ್ಟೆ ಎಂದು ಡಿಫೆನ್ಸ್ ತೆಗೆದುಕೊಂಡು '5ಬಿ' ಯಲ್ಲಿ ದಂಡ ವಿಧಿಸಿದ್ದರೆ ಅದಕ್ಕೆ ಯಾರಿಗೂ ಒಳಪಡಿಸಿಲ್ಲ. ಡಿಸಿಗೆ ಅಪೀಲ್ ಹೋದ ತಕ್ಷಣ ಉದ್ದೇಶ ಪೂರ್ವಕವಾಗಿ ಕೊಟ್ಟಿಲ್ಲ ಈ ರೀತಿ ಬಂದಿತು ಎಂದು ಹೇಳುತ್ತಾರೆ. ಒಂದು ಕಡೆ ಸಿವಿಲ್ ಕೋರ್ಟ್‌ನ ಎಲ್ಲಾ ಕಾನೂನು ಅವರಿಗೆ ಕೊಟ್ಟು ಇನ್ನೊಂದು ಕಡೆ ಉದ್ದೇಶಪೂರ್ವಕವಾಗಿ ಶೆಲ್ಟರ್ ತೆಗೆದುಕೊಳ್ಳುವ ಕ್ಲಾಸ್ ಮಾಡಿದ್ದೀರಿ. ಅವರಿಗೆ ಅಷ್ಟೊಂದು ಅಧಿಕಾರ ಕೊಟ್ಟ ಮೇಲೆ 'ಉದ್ದೇಶಪೂರ್ವಕವಾಗಿ ಇರುವ ಪದ ತೆಗೆಯಬೇಕೆಂದು ನನ್ನ ಅಭಿಪ್ರಾಯ. '6ಇ' ಯಲ್ಲಿ ಯಾರು ಸುಳ್ಳು ಪ್ರಮಾಣ ಪತ್ರ ಕೊಟ್ಟು ಪದವಿ ಪಡೆದಿರುತ್ತಾರೆ, ಅವರ ಪದವಿ ರದ್ದು ಮಾಡಬೇಕೆಂದು ಹೇಳಿದ್ದೀರಿ, ಅದು ತಪ್ಪಾಗುತ್ತದೆ. ಜಾತಿ ಸರ್ಟಿಫಿಕೇಟ್, ಇನ್‌ಕಮ್ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಾರೆ, ಆ ಮೂಲಕ ಅವನು ಕೆಲಸ ಪಡೆದಿದ್ದರೆ ಅವನಿಗೆ ತೆಗೆಯಿರಿ. ಅವನು ಸ್ವಶಕ್ತಿಯಿಂದ ಚೆನ್ನಾಗಿ ಓದಿರುತ್ತಾನೆ, ಚೆನ್ನಾಗಿ ಓದಿ ಪದವಿ ಗಳಿಸಿರುತ್ತಾನೆ, ಸರ್ಟಿಫಿಕೇಟ್ ಯಾರೋ ತಂದೆ ತಾಯಿ ತಂದು ಕೊಟ್ಟಿರುತ್ತಾರೆ. ಆ ಉದ್ದೇಶದಿಂದ ಆ ಮಗುವಿನ ಪದವಿಯಾಗಲಿ, ಡಿಪ್ಲೊಮಾ, ಡಿಗ್ರಿಯಾಗಲಿ ವಾಪಸ್ ಪಡೆಯುವುದು ತಪ್ಪಾಗುತ್ತದೆ. ಈ ಆ್ಯಕ್ಷನ್‌ನಿಂದ ನೀವು ಅವನ ವಿದ್ಯಾರ್ಹತೆಯನ್ನು ಪ್ರಶ್ನೆ ಮಾಡುವ ಹಾಗಾಗುತ್ತದೆ. ಸುಳ್ಳು ಸರ್ಟಿಫಿಕೇಟ್ ಕೊಟ್ಟು ಕೆಲಸ ಕೊಟ್ಟಿದ್ದರೆ ವಿತ್‌ಡ್ರಾ ಮಾಡುವುದು ಸೂಕ್ತ. ಅಡ್ಮಿಷನ್ ಆಗಿದ್ದರೆ ಅಡ್ಮಿಷನ್ ಸಮಯದಲ್ಲಿ ವಿತ್‌ಡ್ರಾ ಮಾಡುವುದು ಸೂಕ್ತ. ಪಿಹೆಚ್‌ಡಿ ಅಥವಾ ಡಿಗ್ರಿ ಮಾಡಿರುತ್ತಾರೆ, ಸ್ವ ಶಕ್ತಿಯಿಂದ ಪಿಹೆಚ್‌ಡಿ ಮಾಡಿರತಕ್ಕಂಥಾದ್ದು ನೀವು ಜಾತಿ ಸರ್ಟಿಫಿಕೇಟ್ ತಪ್ಪು ಕೊಟ್ಟಿದ್ದೀರಿ ಎಂದು ಡಿಗ್ರಿ ವಜಾ ಮಾಡುವ ಕ್ಲಾಸ್ ಏನು ಮಾಡಿದ್ದೀರಿ ಇದನ್ನು ಕೂಡ ವಿತ್‌ಡ್ರಾ ಮಾಡಬೇಕೆಂದು ಹೇಳುತ್ತಾ, ಈ ಎರಡು-ಮೂರು ನ್ಯೂನತೆಗಳನ್ನು ಸರಿಪಡಿಸಿದರೆ ಇದು ಬಹಳ ಪ್ರೊಗ್ರೆಸೀವ್ ಅಮೆಂಡ್‌ಮೆಂಟ್ ಎಂದು ನನಗನ್ನಿಸುತ್ತದೆ.

೪.೧೦ ಪಿಎಂ

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ನಾನು ಈ ಒಂದು ವಿಧೇಯಕವನ್ನು ಸ್ವಾಗತ ಮಾಡುತ್ತೇನೆ ಹಾಗೂ ಈಗೇನು ವಿಧೇಯಕದ ಮೂಲಕ

ತಹಸೀಲ್ದಾರ್‌ಗೆ ಅಧಿಕಾರ ಕೊಟ್ಟಿದ್ದೀರಿ ಅದರ ಜೊತೆಗೆ ಡಿಸ್‌ಪೋಸಲ್ ಬಗ್ಗೆ ಟೈಮ್ ಲಿಮಿಟ್ ಫಿಕ್ಸ್ ಮಾಡಬೇಕಾದ ಅಗತ್ಯವಿದೆ. ಏಕೆಂದರೆ ಸರ್ಟಿಫಿಕೇಟ್ ಕೊಡುವ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರೊಸೀಜರ್‌ನ್ನು ಉದ್ದವಾಗಿ ಎಳೆದುಕೊಂಡು ಹೋಗುವುದರಿಂದ ಮಕ್ಕಳಿಗೆ ಸರ್ಟಿಫಿಕೇಟ್ ಸಮಯಕ್ಕೆ ಸರಿಯಾಗಿ ಸಿಗದೆ ಶಾಲೆಗೆ ಸೇರುವುದಕ್ಕೆ ಅಥವಾ ಕೆಲಸಕ್ಕೆ ಸೇರುವುದಕ್ಕೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ವಿಧೇಯಕದಲ್ಲಿ ಸೇರಿಸಬೇಕು. ಇನ್ನು 4(ಎಫ್)ನಲ್ಲಿ ಏನು ಹೇಳಲಾಗಿದೆಯೆಂದರೆ,

"Provided the Deputy Commissioner shall not pass an order prejudicial to any person unless such person is given an opportunity of being heard."

ಎಂದು ಹೇಳಲಾಗಿದೆ. ಅಂದರೆ ಅವರಿಗೆ ಯಾರು ವಿರೋಧವಾಗಿ ಆರ್ಡರನ್ನು ಮಾಡುತ್ತಾರೆ. He will be given an opportunity. ಅಂಥಾದ್ದು ಇರುವಾಗ ನೀವು 4(ಎಫ್)ನಲ್ಲಿ ರೆಮಿಟೆನ್ಸ್‌ಗೆ ಅವಕಾಶ ಏಕೆ ಕೊಡುತ್ತೀರಿ? ರಿಮ್ಯಾಂಡ್ ಮಾಡಿದಾಗ ಪುನಃ ಪ್ರೊಸೀಡಿಂಗ್ಸ್‌ನಲ್ಲಿ ಡಿಲೇ ಆಗುತ್ತದೆ. There is no finality. ಅದಕ್ಕೋಸ್ಕರ Let the matter be disposed of at the stage of Dy.Commissioner itself Let it not go back to the Tahsildar again. ಆದುದರಿಂದ ರೆಮಿಟೆಡ್ ಎನ್ನುವ ಪದವನ್ನು ತೆಗೆಯಬೇಕಾದ ಅವಶ್ಯಕತೆ ಇದೆ. ಹೀಗೆ ಮಾಡುವುದರಿಂದ ಡೆಪ್ಯುಟಿ ಕಮಿಷನರ್ ಸ್ಟೇಜ್‌ನಲ್ಲಿ ಫೈನಲ್ ಆಗುತ್ತದೆ. ಈ ರೀತಿ ಒಂದು ಬದಲಾವಣೆಯನ್ನು ಮಾಡಬೇಕೆನ್ನುವ ಸಲಹೆಯನ್ನು ನಾನು ಕೊಡಬಯಸುತ್ತೇನೆ.

+ ಶ್ರೀ ಸಿ.ಗುರುಸ್ವಾಮಿ(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಈಗ ತಂದಿರುವ ಮಸೂದೆಯೇನೋ ಬಹಳ ಉತ್ತಮವಾಗಿದೆ. ಈಗಾಗಲೇ ಸುಳ್ಳು ಅಫಿಡವಿಟ್ ಕೊಟ್ಟು ಸರ್ಟಿಫಿಕೇಟ್‌ಗಳನ್ನು ಪಡೆದಿರುವ ಪ್ರಕರಣಗಳು ಬೇಕಾದಷ್ಟು ಇವೆ. ಇದನ್ನು ಒಪ್ಪಲೇಬೇಕಾಗಿದೆ. ಆದರೆ ವಿಧೇಯಕದ 5(ಎ)ನಲ್ಲಿ ಪನಿಷ್‌ಮೆಂಟ್ ಕೊಡುವ ಬಗ್ಗೆ ಹೇಳುತ್ತಾ ''ಸುಳ್ಳು ಮಾಹಿತಿಯನ್ನು ಒದಗಿಸಿ, ಸುಳ್ಳು ಹೇಳಿಕೆಯನ್ನು ನೀಡಿ, ಯಾವುದೇ ಇತರ ಮೋಸದ ವಿಧಾನಗಳಿಂದ ಸರ್ಟಿಫಿಕೇಟ್ ಪಡೆದಂಥವರಿಗೆ ಏನು ಶಿಕ್ಷೆ ಕೊಡಬೇಕು ಎಂದು ಹೇಳಿದೆ. ಇನ್ನು 5(ಬಿ)ನಲ್ಲಿ ಏನು ಹೇಳಲಾಗಿದೆಯೆಂದರೆ ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಪ್ರಮಾಣ ಪತ್ರ ನೀಡಿದ್ದಕ್ಕಾಗಿ ದಂಡ ಎಂದು ಹೇಳಲಾಗಿದೆ. ಯಾವ ಅಧಿಕಾರಿ ಈ ಪ್ರಮಾಣ ಪತ್ರವನ್ನು ಉದ್ದೇಶಪೂರ್ವಕವಾಗಿ ತಪ್ಪು ಎಂದು ತಿಳಿದಿದ್ದರೂ ಕೊಡುತ್ತಾರೋ ಅವರಿಗೆ ಶಿಕ್ಷೆ ಕೊಡುವ ಬಗ್ಗೆ ಹೇಳಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ. ಅಧಿಕಾರಿ ಮಾಡಿರುವ ತಪ್ಪನ್ನು

ಕಂಡುಹಿಡಿದು ಅವರಿಗೆ ಶಿಕ್ಷೆ ವಿಧಿಸುವ ಏಜೆನ್ಸಿ ಯಾರು? ಈ ಕೆಲಸವನ್ನು ಯಾರಿಗೆ ವಹಿಸಿಕೊಡುತ್ತೀರಿ? ಇದನ್ನು ಡೆಪ್ಯೂಟಿ ಕಮೀಷನರ್‌ಗೆ ಅಥವಾ ಇನ್ನಿತರ ಅಧಿಕಾರಿಗಳಿಗೆ ವಹಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಇದನ್ನಾದರೂ ಸಿವಿಲ್ ನ್ಯಾಯಾಲಯಕ್ಕೆ ವಹಿಸಿದರೆ ಅಧಿಕಾರಿಗಳಲ್ಲಿ ಭಯ ಬಂದು ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಆದುದರಿಂದ ಈ ಕೆಲಸವನ್ನು ಯಾರು ಮಾಡುತ್ತಾರೆ ಎಂಬ ಬಗ್ಗೆ ಸ್ಪಷ್ಟವಾಗಿ ವಿಧೇಯಕದಲ್ಲಿ ತಿಳಿಸಬೇಕಾದ ಅಗತ್ಯವಿದೆ. ಪೋಲೀಸ್ ಸ್ಟೇಷನ್‌ನಲ್ಲಿ ಕ್ರಿಮಿನಲ್ ಕೇಸ್ ಲಾಡ್ಜ್ ಮಾಡಿ ತದನಂತರ ಪೋಲೀಸ್‌ನವರು ಇದರ ಬಗ್ಗೆ ಇನ್‌ವೆಸ್ಟಿಗೇಟ್ ಮಾಡಿ ತದನಂತರ ಕ್ರಿಮಿನಲ್ ಕೇಸ್‌ನ್ನು ದಾಖಲು ಮಾಡಲಾಗುತ್ತದೆಯೋ, ಅಥವಾ ಸೆಪರೇಟ್ ಏಜೆನ್ಸಿ ಏನಾದರೂ ಅಧಿಕಾರಿಗಳು ಮಾಡಿದ ಅಪರಾಧದ ಬಗ್ಗೆ ಎನ್‌ಕ್ವೈರಿ ಮಾಡಿ ತಪ್ಪಿತಸ್ಥರು ಎಂದು ತೀರ್ಮಾನ ಮಾಡುತ್ತಾರೋ? ಯಾರು ಈ ಕೆಲಸವನ್ನು ಮಾಡುತ್ತಾರೆ ಎಂಬ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕು. ಈಗ ತಂದಿರುವ ತಿದ್ದುಪಡಿ ವಿಧೇಯಕದಲ್ಲಿ ಈ ಬಗ್ಗೆ ಎಲ್ಲಿಯೂ ಹೇಳಿಲ್ಲವಾದ್ದರಿಂದ ಅದರ ಬಗ್ಗೆ ಸಚಿವರು ವಿವರಣೆಯನ್ನು ಕೊಡಬೇಕು.

+ ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ತಹಸೀಲ್ದಾರರು ಉದ್ದೇಶಪೂರ್ವಕವಾಗಿ ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಪತ್ರವನ್ನು ನೀಡಿದ್ದಾರೆ ಎನ್ನುವುದರಲ್ಲಿ ''ಉದ್ದೇಶಪೂರ್ವಕವಾಗಿ'' ಎನ್ನುವ ಪದವನ್ನೇ ತೆಗೆಯಬೇಕು ಎನ್ನುವುದು ನನ್ನ ಅನಿಸಿಕೆ. ಅಧಿಕಾರಿಗಳು ತಪ್ಪಿಸಿಕೊಳ್ಳುವುದಕ್ಕೆ ಇದೊಂದೇ ಅವರಿಗೆ ಸಾಕಾಗುತ್ತದೆ. ಎಲ್ಲಕ್ಕಿಂತ ಈ ಬಿಲ್ ಬಂದ ಮೇಲೆ ನಾಳೆಯಿಂದ ಸರ್ಟಿಫಿಕೇಟ್ ಪಡೆದುಕೊಳ್ಳುವುದೇ ಬಹಳ ಕಷ್ಟವಾಗುತ್ತದೆ. ಸರ್ಟಿಫಿಕೇಟ್ ಈಗಲೇ ಕೊಡುವುದು ಕಷ್ಟವಾಗಿದೆ. ಸಾಮಾನ್ಯವಾಗಿ ಎಸ್‌ಸಿ/ಎಸ್‌ಟಿ ಮಕ್ಕಳ ತಂದೆ ತಾಯಿಗಳು ಅವಿದ್ಯಾವಂತರಾಗಿರುತ್ತಾರೆ. ಇವರು ಆ ಕಛೇರಿಗೆ ಅಲೆದು ಅಲೆದು ಸಾಕಾಗಿ ಹೋಗುತ್ತಾರೆ. ಒಂದೊಂದು ಸಂದರ್ಭದಲ್ಲೂ ಶಾಲೆಯ ಸರ್ಟಿಫಿಕೇಟ್ ತೆಗೆದುಕೊಂಡು ಬಾ ಎಂತಲೂ, ಹುಡುಗನಿಗೆ ನಿಮ್ಮ ಅಮ್ಮ ಹುಟ್ಟಿದ ದಾಖಲೆ ತೆಗೆದುಕೊಂಡು ಬಾ, ನಿಮ್ಮ ಅಪ್ಪ ಹುಟ್ಟಿದ ದಾಖಲೆ ಪತ್ರ ತೆಗೆದುಕೊಂಡು ಬಾ, ಎಂದು ಹೇಳುತ್ತಾ ಅವನಿಗೆ ಅಲೆಸಿ ಅಲೆಸಿ ಹಣ್ಣು ಹಣ್ಣಾಗಿ ಮಾಡಿಬಿಡುತ್ತಾರೆ. ಇನ್ನು ನಾಳೆಯಿಂದ ಈ ಬಿಲ್ ಜಾರಿಗೆ ಬಂದು ಬಿಟ್ಟರೆ ಯಾವ ತಹಸೀಲ್ದಾರ್ ಕೂಡ ಪ್ರಮಾಣ ಪತ್ರ ಕೊಡುವ ಕೆಲಸಕ್ಕೆ ಕೈ ಹಾಕಲು ಹೆದರುತ್ತಾರೆ. ಒಂದು ರೀತಿಯಲ್ಲಿ ಬೆಂಕಿಯನ್ನು ಸೆರಗಲ್ಲಿ ಕಟ್ಟಿಕೊಂಡ ಹಾಗೆ ಎಂದು ಚಡಪಡಿಸುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅದಕ್ಕಾಗಿ ಆ್ಯಕ್ಟ್‌ನಲ್ಲಿಯೇ ಒಂದು ಅಂಶವನ್ನು ಸೇರಿಸಿ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸಿದ ಇಷ್ಟು ದಿವಸಗಳೊಳಗೆ ಪ್ರಮಾಣ ಪತ್ರ ಕೊಡಬೇಕು. ಒಂದು ವೇಳೆ ಕೊಡುವುದಕ್ಕೆ ಆಗದಿದ್ದರೆ ಆ ವಿಚಾರವನ್ನು ಅವನಿಗೆ ತಿಳಿಸುವಂತೆ ಆ್ಯಕ್ಟ್‌ನಲ್ಲಿಯೇ

ಸೇರಿಸಬೇಕು. ಈ ಅಂಶವನ್ನು ಆ್ಯಕ್ಟ್‌ನಲ್ಲಿ ಸೇರಿಸಬೇಕಾಗುತ್ತದೆ. ಇನ್ನು ಪ್ರಮಾಣ ಪತ್ರ ಪಡೆಯಲು ಬೇಕಾದ ಎಲ್ಲಾ ದಾಖಲಾತಿಗಳು ಹೆಚ್ಚು ಕಡಿಮೆ ಕಂದಾಯ ಇಲಾಖೆಯ ವ್ಯಾಪ್ತಿಯೊಳಗೆ ಬರುವುದರಿಂದ, ಸಿಗುವುದರಿಂದ ಆ ಎಲ್ಲಾ ದಾಖಲಾತಿಗಳನ್ನು ತಹಸೀಲ್ದಾರರೇ ತರಿಸಿಕೊಳ್ಳುವ ಹಾಗೆ ಮಾಡಬೇಕಾದ ಅಗತ್ಯವಿದೆ. ಈ ರೀತಿ ಮಾಡುವುದರಿಂದ ಯಾರು ಜಿನ್ಯೆನ್ ಇರುತ್ತಾನೆ ಅವನಿಗೆ ಪ್ರಮಾಣ ಪತ್ರ ಪಡೆದುಕೊಳ್ಳಲು ಸುಲಭವಾಗುತ್ತದೆ. ಇಲ್ಲದಿದ್ದರೆ ಸುಮ್ಮನೇ ಎಲ್ಲಾ ಕಛೇರಿಗಳಿಗೂ ಅಲೆದು ಅಲೆದು ಕಡೆಗೆ ಈ ಸರ್ಟಿಫಿಕೇಟ್ ಸಹವಾಸವೇ ಬೇಡ ಎಂದು ಮನೆಯಲ್ಲಿಯೇ ಕೂರಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ಇಷ್ಟು ದಿವಸಗಳಲ್ಲಿಯೇ ಸರ್ಟಿಫಿಕೇಟ್ ಇಶ್ಯೂ ಮಾಡಬೇಕು ಎಂದು ಆ್ಯಕ್ಟ್‌ನಲ್ಲಿಯೇ ಹೇಳಬೇಕು. ಈ ರೀತಿ ಮಾಡಿದಾಗಲೇ ತಹಸೀಲ್ದಾರರುಗಳು ಅಗತ್ಯ ದಾಖಲೆಗಳನ್ನು ಬೇಗ ತರಿಸಿಕೊಂಡು ಕೆಲಸ ಮಾಡಲು ಕ್ರಮ ತೆಗೆದುಕೊಳ್ಳುತ್ತಾರೆ. ಪ್ರಮಾಣ ಪತ್ರ ಪಡೆಯಲು ವಂಶವೃಕ್ಷದ ದಾಖಲೆ ಪತ್ರ ಕೊಡಬೇಕು. ಇದನ್ನು ವಿಲೇಜ್ ಅಕೌಂಟೆಂಟ್ ಕೊಡಬೇಕು. ತಹಸೀಲ್ದಾರರೇ ಇದನ್ನು ಆತನಿಂದ ತರಿಸಿಕೊಳ್ಳಲು ಏನು ತೊಂದರೆ? ಈ ರೀತಿಯಲ್ಲಿ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಅವರೇ ತರಿಸಿಕೊಳ್ಳುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಸಾಮಾನ್ಯ ಜನರು ಅಧಿಕಾರಿಗಳು ಮತ್ತು ನೌಕರರ ಬಳಿಗೆ ಹೋಗಿ ಅಲೆದು ಅಲೆದು ಸರ್ಟಿಫಿಕೇಟ್ ಪಡೆಯುವ ಬಗ್ಗೆಯೇ ಬೇಸರವಾಗಿಬಿಡುತ್ತದೆ. ಅದರಲ್ಲೂ ದಲಿತ ವ್ಯಕ್ತಿಗಳಂತೂ ಪ್ರತಿದಿನ ಅಲೆದು ಅಲೆದು ತನ್ನಲ್ಲಿಯೇ ತನ್ನ ಬಗ್ಗೆ ಕೀಳರಿಮೆ ಪಡುವ ಹಂತಕ್ಕೆ ಬಂದುಬಿಡುವ ಮಟ್ಟಕ್ಕೆ ಬರುತ್ತಾರೆ. ಇಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಲೇಬಾರದು ಎಂಬುದಾದರೆ ಆತ ಅರ್ಜಿ ಕೊಟ್ಟನಂತರ ಪ್ರಮಾಣ ಪತ್ರ ಕೊಟ್ಟ ನಂತರ ಅದಕ್ಕೆ ಬೇಕಾದ ಇನ್ನಿತರ ದಾಖಲಾತಿಗಳನ್ನು ತಹಸೀಲ್ದಾರರೇ ತರಿಸಿಕೊಂಡು ಒಂದು ತಿಂಗಳೊಳಗಾಗಿ ಸರ್ಟಿಫಿಕೇಟ್ ಇಷ್ಯೂ ಮಾಡಬೇಕು. ಒಂದು ವೇಳೆ ಸರ್ಟಿಫಿಕೇಟ್ ಕೊಡಲು ಆಗದಿದ್ದರೆ ಆ ಬಗ್ಗೆಯಾದರೂ ಆತನಿಗೆ ತಿಳಿಸಬೇಕು. ಯಾವ ಕಾರಣಕ್ಕಾಗಿ ಸರ್ಟಿಫಿಕೇಟ್ ಕೊಡುವುದಕ್ಕೆ ಆಗುವುದಿಲ್ಲವೆನ್ನುವ ಬಗ್ಗೆ ಒಂದು ಎಂಡಾರ್ಸ್‌ಮೆಂಟ್ ಕೊಡುವಂತಿರಬೇಕು. ಇದನ್ನೂ ಆ್ಯಕ್ಟ್‌ನಲ್ಲಿ ಹೇಳಬೇಕು. ಇನ್ನು ಸರ್ಟಿಫಿಕೇಟ್ ಪಡೆದ ಮೇಲೆ ಮತ್ತೆ 5 ವರ್ಷಕ್ಕೆ ರಿನ್ಯುವಲ್ ಮಾಡಬೇಕೆಂದು ಹೇಳಿದ್ದೀರಿ. ಇದು ಏಕೆ? ಸರ್ಟಿಫಿಕೇಟ್ ಪಡೆದವನು ಆಗಿಂದಾಗ್ಗೆ ಜಾತಿಯನ್ನು ಬದಲಾಯಿಸುತ್ತಾನೆಯೇ?

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು): ಅದನ್ನು ತೆಗೆದಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ: ನೀವು ಅದನ್ನು ಯಾವಾಗ ತೆಗೆದಿರೋ ಗೊತ್ತಿಲ್ಲ. ನಮ್ಮ ತಾಲ್ಲೂಕು ಆಫೀಸ್‌ಗಳಿಗೆ ಆ ಬಗ್ಗೆ ಸರ್ಕಾರಿ ಆದೇಶಗಳು ಇನ್ನೂ ಬಂದಿಲ್ಲ. ಬಹುಶಃ

ನಿಮ್ಮ ಕಛೇರಿಯಲ್ಲಿಯೇ ಇರಬಹುದು. ಏಕೆಂದರೆ ನಮ್ಮ ತಾಲ್ಲೂಕು ಕಛೇರಿಯಲ್ಲಿ ಇನ್ನೂ ರಿನ್ಯೂವಲ್ ಮಾಡಿಸುವ ಪದ್ಧತಿ ಇಟ್ಟುಕೊಂಡಿದ್ದಾರೆ. ಇದಕ್ಕಾಗಿ ಜನರು ಕ್ಯೂ ನಿಂತಿರುತ್ತಾರೆ. ಅದರಲ್ಲೂ ಶಾಲೆಗೆ ಪ್ರವೇಶ ಮಾಡಬೇಕಾದ ಸಮಯದಲ್ಲಂತೂ ಈ ರಿನ್ಯುವಲ್‌ಗಾಗಿ ತಾಲ್ಲೂಕು ಕಛೇರಿ ಗಿಜಿ ಗಿಜಿ ಎಂದು ಇರುತ್ತದೆ. ಅಲ್ಲಿ ಈ ಸರ್ಟಿಫಿಕೇಟ್ ಮಾಡಿಸಿಕೊಡುವುದಕ್ಕೆ ಒಂದು ವರ್ಗ ಅಲ್ಲಿರುತ್ತದೆ. ಆರ್.ಟಿ.ಓ. ಕಛೇರಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಇಂಥ ವರ್ಗದವರು ತಮ್ಮ ಹೊಟ್ಟೆ ಹೊರೆಯುವುದಕ್ಕೆ ಇರುತ್ತಾರೆ. ಅವರಿಗೆ ಇದೇ ದಂಧೆಯಾಗಿರುತ್ತದೆ. ಇದನ್ನು ತಪ್ಪಿಸಬೇಕಾದ ಅಗತ್ಯವಿದೆ. ಆದುದರಿಂದ ಸರ್ಟಿಫಿಕೇಟ್ ಪಡೆಯಲು ನಿಯಮಗಳನ್ನು ಸರಳೀಕರಣ ಮಾಡಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರಿಗೂ ಈ ಸಮಸ್ಯೆಯ ಬಗ್ಗೆ ಅರಿವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಶಾಸಕರಾಗಿ ಶಾಸಕರ ಕರ್ತವ್ಯಗಳನ್ನು ಮಾಡುವುದಕ್ಕೇ ಈಗಿರುವ ನಿಯಮಗಳಿಂದಾಗಿ ಕಷ್ಟವಾಗುತ್ತಿದೆ. ಅಧ್ಯಕ್ಷರಾದ ತಮಗೂ ಕೂಡ ಅನುಭವವಾಗಿರಬಹುದು. ಒಂದು ಸರ್ಟಿಫಿಕೇಟ್ ತಹಸೀಲ್ದಾರ್ ಕೊಟ್ಟಿಲ್ಲ, ನೀವು ಫೋನ್ ಮಾಡಿ ಹೇಳಿ, ವಂಶವೃಕ್ಷ ಕೊಡಲಿಲ್ಲ, ನೀವು ವಿಲೇಜ್ ಅಕೌಂಟೆಂಟ್‌ರವರಿಗೆ ಫೋನ್ ಮಾಡಿ ಹೇಳಿ ಎಂದು ಪ್ರತಿನಿತ್ಯ ನನ್ನ ಮನೆಗೆ ಬರುವವರೇ ಹೆಚ್ಚಾಗಿದ್ದಾರೆ. ಬೆಳಿಗ್ಗೆ 6 ಗಂಟೆಗೆ ನಮ್ಮನ್ನು ಎಬ್ಬಿಸುವವರೇ ಇಂಥವರಾಗಿರುತ್ತಾರೆ. ಇದು ಯಾವ ಕರ್ಮ ಹೇಳಿ. ಬೆಳಗ್ಗೆ 6 ಗಂಟೆಗೆ ಎದ್ದರೆ ರಾತ್ರಿ ಎಷ್ಟು ಗಂಟೆಗೆ ಮಲಗುತ್ತೇವೋ ನಮಗಂತೂ ಗೊತ್ತಿರುವುದೇ ಇಲ್ಲ. ಸರ್ಟಿಫಿಕೇಟ್ ಕೊಡಿಸುವ ಕೆಲಸ ನಮ್ಮದೇ? ಆದುದರಿಂದ ಸರಾಗವಾಗಿ ಸರ್ಟಿಫಿಕೇಟ್ ಪಡೆಯುವ ಸಲುವಾಗಿ ಸರಳವಾದ ನಿಯಮಗಳನ್ನು ಜಾರಿಗೆ ತರಬೇಕಾದ ಅವಶ್ಯಕತೆ ಇನ್ನು ಮೇಲಾದರೂ ಇದೆ. ಇನ್ನು ತಾವೇನು ಸುಳ್ಳು ಜಾತಿ ಪತ್ರ ತೆಗೆದುಕೊಂಡವರಿಗೆ ಕಠಿಣ ಶಿಕ್ಷೆ ಕೊಡುವ ಬಗ್ಗೆ ಹೇಳಿದ್ದೀರಿ ಅದು ಸರಿಯಾಗಿದೆ. ಏಕೆಂದರೆ ಈ ಹಿಂದೆ ಯಾರ್‍ಯಾರೋ ದಲಿತರ ಹೆಸರಿನಲ್ಲಿ ಸುಳ್ಳು ಸರ್ಟಿಫಿಕೇಟ್ ಪಡೆದು ಏನೇನೋ ಆಗಿಬಿಟ್ಟಿದ್ದಾರೆ. ನಿಜವಾದ ದಲಿತ ಸರ್ಟಿಫಿಕೇಟ್‌ಗಾಗಿ ಇಂದಿನವರೆಗೂ ಹೋಗಿಯೇ ಇಲ್ಲ. ಪರಿಶಿಷ್ಟ ಜಾತಿ/ವರ್ಗದ ನಿಜವಾದ ಜನರು ಕಛೇರಿಗಳಿಗೆ ಹೋಗದೇ ಇಂದು ಮೂಕರಾಗಿ ಬಿಟ್ಟಿದ್ದಾರೆ. ಇದೆಲ್ಲಾ ನಿಬಂಧನೆಗಳು, ಕಟ್ಟುಕಥೆಗಳು ಅವನಿಗೆ ವ್ಯಾಪ್ತಿಯಾಗುತ್ತದೆಯೇ ಏನ: ಯಾರು ಕಳ್ಳಸುಳ್ಳರು ಇದ್ದಾರೆ ಅವರಿಗೆ ಅನ್ವಯವಾಗುವುದಿಲ್ಲವೇನೋ ಎಂದು ಹೇಳಬೇಕಾಗುತ್ತದೆ. ಆದುದರಿಂದ ಶಿಕ್ಷೆ ಕೊಡುವುದನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಮತ್ತು ಸರ್ಟಿಫಿಕೇಟನ್ನು ಇಂತಿಷ್ಟೇ ದಿನಗಳಲ್ಲಿ ಇಷ್ಯೂ ಮಾಡಬೇಕು ಎಂದು ಆ್ಯಕ್ಟ್‌ನಲ್ಲಿಯೇ ಹೇಳಬೇಕು. ಅರ್ಜಿ ಕೊಟ್ಟು ಒಂದು ತಿಂಗಳೊಳಗೆ ಕೊಡಲೇಬೇಕೆಂದು ಹೇಳಿ. ಜಾಸ್ತಿ ಎಂದರೆ ಒಂದು ತಿಂಗಳೊಳಗೆ ಆದಷ್ಟು ಬೇಗ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಎಲ್ಲಾ ರೀತಿಯಲ್ಲೂ ಕಂಪ್ಯೂಟರೈಜ್ ಮಾಡುತ್ತಿದ್ದೀರಿ. ಕಂಪ್ಯೂಟರೈಜ್ ಮಾಡುವುದರಿಂದ

ಬಹಳ ಸುಲಭವಾಗುತ್ತದೆ. ಆ ದೃಷ್ಟಿಯಲ್ಲಿ ಅದನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ಹೊಸದಾಗಿ ಮಂತ್ರಿಗಳಾದಂತಹವರಿಗೆ ಒಂದು ಚಟ ಇರುತ್ತದೆಂದು ಕಾಣುತ್ತದೆ, ಅದೇನೆಂದರೆ ನನ್ನ ಕಾಲದಲ್ಲಿ ಹೀಗೆ ಆಯಿತು, ನಾನು ಇದನ್ನು ಮಾಡಿದೆ ಎನ್ನುವಂತಹ ಚಟಗಳು ಬಹಳಷ್ಟು ಜನ ಮಂತ್ರಿಗಳಿಗೆ ಅಧಿಕಾರಕ್ಕೆ ಹೋದ ತಕ್ಷಣ ಬಂದುಬಿಡುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಅದನ್ನು ನೀವು ಇವತ್ತು ಗುರುತಿಸಿಕೊಂಡಿರಿ ಎಂದು ಆಯಿತು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಮ್ಮ ಜೊತೆಯಲ್ಲಿ ನೀವು ಇದ್ದಾಗ ಮಂತ್ರಿಗಳಾಗಿರಲಿಲ್ಲ. ಈ ಕಾನೂನಿನ ಅವಶ್ಯಕತೆ ಏಕೆ ಬಂತೋ ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಅರಗ ಜ್ಞಾನೇಂದ್ರರವರು ಹೇಳಿರತಕ್ಕಂಥ ಬಹುತೇಕ ವಿಚಾರಗಳನ್ನು ನಾನು ಎತ್ತಿಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೆಂದು ಹೇಳಿದಾಗ ಈ ವಿಚಾರದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಕಮಿಟ್‌ಮೆಂಟ್ ಇಲ್ಲವೆನ್ನುವ ವಿಚಾರವನ್ನು ವೈಯಕ್ತಿಕವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ ಅಧಿವೇಶನದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಇಲಾಖೆಗೆ ಮಂತ್ರಿಗಳಾದ ಮೇಲೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳ ಬಗ್ಗೆ ಅವರಿಗೆ ಇರತಕ್ಕಂಥ ಒಂದು ಕಮಿಟ್‌ಮೆಂಟ್ ಬಗ್ಗೆ ಹೇಳಿದರು. ಅವರು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ಕಾನೂನನ್ನು ತೆಗೆದುಕೊಂಡು ಬಂದರು, ಅದನ್ನು ನಾನು ಒಪ್ಪಿದ್ದೇನೆ. ಏಕೆಂದರೆ ನಾನು ಸಮಾಜಕಲ್ಯಾಣ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಅದನ್ನು ನನ್ನ ಕೈಯಲ್ಲಿ ಮಾಡುವುದಕ್ಕೆ ಆಗಿರಲಿಲ್ಲ. ಅದನ್ನು ಅವರು ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡಿದ್ದೇನೆ. ಆದರೆ ಇದರ ಬಗ್ಗೆ ನಮ್ಮ ತಕರಾರು ಏನೆಂದರೆ ಇದು ಅನಾವಶ್ಯಕ. ನಮಗೆ ರಿಸರ್ವೇಷನ್‌ನವರು ಎಷ್ಟು ಇದ್ದಾರೆ ಎಂದು ಗೊತ್ತಿಲ್ಲ. ಇವತ್ತು ವಾಸ್ತವಾಂಶದಲ್ಲಿ ಸ್ವಾತಂತ್ರ ಬಂದು 50 ವರ್ಷವಾಯಿತು. ಈ 50 ವರ್ಷದಲ್ಲಿ ಸೆನ್ಸಸ್ ಮಾಡುವಂತಹ ಸಂದರ್ಭದಲ್ಲಿ ಜಾತಿವಾರು ಸೆನ್ಸಸ್ ಮಾಡಿದ್ದೇವಾ? ಇದು ಎಸ್‌ಸಿ/ಎಸ್‌ಟಿಗೆ ಸಂಬಂಧಪಟ್ಟರತಕ್ಕಂಥ ಕಾನೂನು ಆಗಿದ್ದರೆ ಮಾತನಾಡುತ್ತಿರಲಿಲ್ಲ. ಅದನ್ನು ಅಳವಡಿಸಿಕೊಂಡು ಹೋಗಿ ಎಂದು ಹೇಳುತ್ತಿದ್ದೆ, ಆದರೆ ಇದರಲ್ಲಿ ಹಿಂದುಳಿದ ವರ್ಗದವರು ಸೇರಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಿ. ಏನೆಂದರೆ ಮುಂದಿನ ಸೆನ್ಸಸ್ ಮಾಡತಕ್ಕಂಥ ಸಂದರ್ಭದಲ್ಲಿ ಯಾವ್ಯಾವ ಜಾತಿ ಎಷ್ಟೆಷ್ಟು ಇದ್ದಾರೆ ಎಂದು ಸೆನ್ಸಸ್ ಮಾಡಿದರೆ, ಆಗ ಗೊತ್ತಾಗುತ್ತದೆ. ನೀವು ಸಮಾಜಕಲ್ಯಾಣ ಇಲಾಖೆ ಮಂತ್ರಿಗಳಾಗಿ 18 ತಿಂಗಳಾಯಿತು.

ಈಗಿರತಕ್ಕಂಥ ಕಾನೂನಿನ ಪ್ರಕಾರ ನೀವು ಸಿ.ಆರ್.ಇ.ಸೆಲ್ ಇಟ್ಟುಕೊಂಡಿದ್ದೀರಿ. ಎಸ್.ಸಿ.:ಎಸ್.ಟಿ ಶೋಷಣೆಗೆ, ದೌರ್ಜನ್ಯಕ್ಕೆ ಒಳಗಾದರೆ ಅದನ್ನು ಪತ್ತೆ ಹಚ್ಚಿ ಶಿಕ್ಷೆ ಕೊಡುವುದಕ್ಕೆ ಕಾನೂನು ಇದೆ. I do not know whether it is under Home Ministry or Social Welfare Ministry. I am not aware in today's situation. ಹಾಗಾದರೆ ಇಷ್ಟೊಂದು ಕಾಳಜಿ ಆ ವರ್ಗದ ಜನಗಳ ಮೇಲೆ ಇರಬೇಕಾದರೆ ಆ ಸಿ.ಆರ್.ಇ. ಸೆಲ್‌ನಲ್ಲಿ ಇರುವಂತಹ ಎಷ್ಟು ಕೇಸುಗಳನ್ನು ಎಕ್ಸ್‌ಪೋಸ್ ಮಾಡಿದ್ದೀರಿ? ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಒಂದು ವಿಚಾರ ವ್ಯಕ್ತ ಮಾಡಿದರು. ಏನೆಂದರೆ ಈ ಸೆಲ್ ಮಾಡಿರುವುದರಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು. ಅದಕ್ಕೆ ಬೆಂಬಲ ಕೊಡುವುದಕ್ಕೆ ನಾನು ತಯಾರಿದ್ದೇನೆ. ಆದರೆ ವಸ್ತುಸ್ಥಿತಿಯಲ್ಲಿ ಸಿ.ಆರ್.ಇ. ಸೆಲ್‌ನಲ್ಲಿ ಇರುವಂತಹ ಕೇಸುಗಳಲ್ಲಿ ಎಷ್ಟನ್ನು ರಿವ್ಯೂ ಮಾಡುವುದಕ್ಕೆ ತಮಗೆ ಸಾಧ್ಯವಾಗಿದೆ? ಮಾನ್ಯ ಗೃಹಮಂತ್ರಿಗಳು, ನೀವೂ ಸಹ ಅದೇ ವರ್ಗದಿಂದ ಬಂದಿರತಕ್ಕಂಥ ಜನ. ನೀವು ಅಧಿಕಾರಕ್ಕೆ ಬಂದು 20 ತಿಂಗಳಾದರೂ ಏನೂ ಮಾಡುವುದಕ್ಕೆ ಆಗಿಲ್ಲ. ಇವತ್ತು ಯಾರು ಸುಳ್ಳು ಸರ್ಟಿಫಿಕೇಟ್ ಕೊಟ್ಟರು, ಅವರು ದೊಡ್ಡ ದೊಡ್ಡ ಸ್ಥಾನದಲ್ಲಿ ಕುಳಿತುಕೊಂಡಿದ್ದಾರೆ. ಎಷ್ಟು ಜನರ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಕ್ಕಾಗಿದೆ? ಒಬ್ಬ ಅಸಿಸ್ಟೆಂಟ್ ಕಮಿಷನರ್, ಡೆಪ್ಯೂಟಿ ಕಮಿಷನರ್ ಸುಳ್ಳು ಸರ್ಟಿಫಿಕೇಟ್ ಕೊಟ್ಟಿದ್ದರೆ, ಅವರನ್ನು ಕ್ರಿಮಿನಲ್ ಲಾ ಪ್ರಕಾರ ಮನೆಗೆ ಕಳುಹಿಸುವುದಕ್ಕೆ ಅಧಿಕಾರ ಇದೆ. ನೀವೇನಾದರೂ 400 ಅಥವಾ 500 ಜನರನ್ನು ಕಳುಹಿಸಿದ್ದರೆ ನಾನು ಈ ಕಾನೂನನ್ನು ಒಪ್ಪಿಕೊಳ್ಳುತ್ತಿದ್ದೆ. ಇನ್ನು ತಹಸೀಲ್ದಾರ್ ಪುಣ್ಯಾತ್ಮರು, ಬಂದು ಕುಳಿತುಕೊಳ್ಳುತ್ತಾರೆ, ಆದರೆ ಅವರು ಕಾನೂನನ್ನು ಓದುವುದಕ್ಕೆ ಹೋಗುವುದಿಲ್ಲ. ಮಾನ್ಯ ಖರ್ಗೆಯವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಒಂದು ರೆವಲ್ಯೂಷನ್ ಮಾಡುವುದಕ್ಕೆ ನೋಡಿದರು. ಆದರೆ ಆ ಕಡತ ಅಲ್ಲೇ ನಿಂತು ಹೋಯಿತು. ಸೆನ್ಸಸ್ ಬಗ್ಗೆ ನೀವು ಏನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಕೈಯಲ್ಲಿ ಅದು ಇಲ್ಲದಿರಬಹುದು. ಸರ್ಟಿಫಿಕೇಟ್ ಬೇಕಾದರೆ, ಅದು 30 ಸಾವಿರ, 50 ಸಾವಿರ ಹಾಗೂ ಒಂದು ಲಕ್ಷ ರೂಪಾಯಿಯವರೆಗೂ ಮಾರಾಟವಾದವು. ಈ ಗ್ರಾಮಪಂಚಾಯಿತಿ ಎಲೆಕ್ಷನ್ ಬರುತ್ತದೆಯಲ್ಲಾ, ಆಗ ಯಾವ ಜಾತಿಯವರು ಬೇಕಾದರೂ ಯಾವ ಸರ್ಟಿಫಿಕೇಟ್ ತೆಗೆದುಕೊಳ್ಳಬಹುದು. 'ಎ' ವರ್ಗ, 'ಬಿ' ವರ್ಗ ಇದಕ್ಕೆ ಏನಾದರೂ ಅರ್ಥ ಇದೆಯೆ? ತಾವು ಯೋಚನೆ ಮಾಡಿ. ಗ್ರಾಮ ಪಂಚಾಯಿತಿ ಚುನಾವಣೆಗೆ ನಿಲ್ಲಬೇಕಾದರೆ 'ಎ' ಮತ್ತು 'ಬಿ' ವರ್ಗಕ್ಕೆ ಕೊಡಬೇಕಾದಂತಹ ಸರ್ಟಿಫಿಕೇಟ್ ವಿಚಾರದಲ್ಲಿ ಯಾವರೀತಿ ಆಗುತ್ತದೆ ಎಂದು ಗೌರವಾನ್ವಿತ ಎಲ್ಲಾ ಸದಸ್ಯರುಗಳಿಗೂ ಗೊತ್ತಿರತಕ್ಕಂಥ ವಿಚಾರ. ಇನ್ನು ಶಾಲಾಕಾಲೇಜುಗಳ ಪ್ರವೇಶ. ಈಗ ಕೆಲವು ತಾಲ್ಲೂಕುಗಳಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್

ಹಾಸ್ಟೆಲ್ ಹಾಗೂ ಸೋಷಿಯಲ್ ವೆಲ್‌ಫೇರ್ ಹಾಸ್ಟೆಲ್‌ಗಳಲ್ಲಿ ನಾವು ಸ್ಯಾಂಕ್ಷನ್ ಮಾಡಿರತಕ್ಕಂಥ ರಿಕ್ವೈರ್ಡ್ ಸ್ಟ್ರೆಂಗ್ತ್ ಏನಿದೆ ಅಷ್ಟು ಹುಡುಗರು ಬರುವುದಿಲ್ಲ. ಅಷ್ಟು ಚೆನ್ನಾಗಿ ನಮ್ಮ ಹಾಸ್ಟೆಲ್‌ಗಳು ಇದೆ. ಅದು ಒಂದು ಭಾಗ. ಆದರೆ ಆ ಹಾಸ್ಟೆಲ್‌ಗಳ ಅಡ್ಮಿಷನ್‌ಗೂ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಹೋಗಬೇಕು. ನಾನು ಕೆಲವು ತಾಲ್ಲೂಕುಗಳಿಗೆ ಭೇಟಿ ಮಾಡಿದಾಗ ಅಲ್ಲಿ ಅಧಿಕಾರಿಗಳು ಸಿಗುವುದೇ ಇಲ್ಲ. ಹಾಗೆ ಸಿಗದೇ ಇರುವಂತಹ ಪುಣ್ಯಾತ್ಮರ ಕೈಯಲ್ಲಿ ನೀವು ಬ್ರಹ್ಮಾಸ್ತ್ರ ಕೊಟ್ಟುಬಿಟ್ಟರೆ, ಎಷ್ಟು ಚೆನ್ನಾಗಿ ದಂಧೆ ಮಾಡಿಕೊಳ್ಳುತ್ತಾರೆಂದು ತಾವು ಯೋಚನೆ ಮಾಡಿ. ಒಂದು ಚುನಾವಣೆ ಸಂದರ್ಭದಲ್ಲಿ, ಮತ್ತೊಂದು ಅಡ್ಮಿಷನ್ ಮಾಡಿಸಿಕೊಳ್ಳಬೇಕಾದರೆ ಹಾಗೂ ಸರ್ಕಾರಿ ಕೆಲಸಗಳಿಗೆ ಸೇರಬೇಕಾದರೆ, ಈ ಮೂರು ಹಂತದಲ್ಲಿ ಸರ್ಟಿಫಿಕೇಟ್ ಕೇಳುತ್ತಾರೆ. ಈಗ ಸಾಕಷ್ಟು ಕಾನೂನುಗಳು ಇರುವಾಗ ನೀವು ಇದರ ಬಗ್ಗೆ ಸ್ಟ್ರೀಮ್‌ಲೈನ್ ಮಾಡತಕ್ಕಂಥಾದ್ದನ್ನು ಬಿಟ್ಟು, ಇವತ್ತು ಕೆಳಮಟ್ಟದ ಅಧಿಕಾರಿಗಳಿಗೆ ಮತ್ತಷ್ಟು ಅಧಿಕಾರ ಕೊಟ್ಟು ಅದನ್ನು ದೊಡ್ಡ ಬ್ರಹ್ಮಾಸ್ತ್ರವನ್ನಾಗಿ ಮಾಡಿ the entire process of issuing certificates by District Officers. ಇದೊಂದು ದೊಡ್ಡ ಭ್ರಷ್ಟಾಚಾರಕ್ಕೆ ತಾವು ಅನುಕೂಲವನ್ನು ಮಾಡಿಕೊಡುತ್ತಿದ್ದೀರಿ. ಬ್ಯಾಕ್‌ವರ್ಡ್ ಕ್ಲಾಸ್ ಡಿಸ್ಟ್ರಿಕ್ಟ್ ಆಫೀಸರ್ ಇದ್ದಾರಲ್ಲಾ ಅವರು, ಈ ಎಂಬಿಬಿಎಸ್‌ಗೆ ಅಡ್ಮಿಷನ್ ತೆಗೆದುಕೊಂಡಿರುವವರು, ಬಿ.ಇಡಿಗೆ ಅಡ್ಮಿಷನ್ ತೆಗೆದುಕೊಂಡಿರುವವರು ದುಡ್ಡು ಕೊಟ್ಟರೆ ಮಾತ್ರ ಸರ್ಟಿಫಿಕೇಟ್ ಹಾಗೂ ವೆರಿಫಿಕೇಷನ್ ಮಾಡುವುದು. ಬನ್ನಿ ನಾನು ಎಷ್ಟು ಬೇಕಾದರೂ ತೋರಿಸಿಕೊಡುತ್ತೇನೆ. ಆದುದರಿಂದ ಅದನ್ನು ಸ್ಟ್ರೀಮ್‌ಲೈನ್ ಮಾಡಿ. ತಾವು 27 ಜಿಲ್ಲೆಗಳಲ್ಲಿ ಹೋಗಿ ನೋಡಿ. ಎಷ್ಟು ಸರ್ಟಿಫಿಕೇಟ್ ಕೊಟ್ಟಿದ್ದೀರಿ. ಈ ಸಂದರ್ಭದಲ್ಲಿ ನಾನು ಮಾನ್ಯ ಬಸವಲಿಂಗಪ್ಪನವರನ್ನು ಜ್ಞಾಪಿಸಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: ಹೇಗೆ ಸ್ಟ್ರೀಮ್‌ಲೈನ್ ಮಾಡುವುದೆಂದು ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಸೋಷಿಯಲ್ ವೆಲ್‌ಫೇರ್ ಮಂತ್ರಿಯಾಗಿದ್ದಾಗ ಏನು ಮಾಡಿದ್ದೆ ಎಂದು ಹೇಳುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: ನಾನು ತಮ್ಮ ವಿಚಾರಧಾರೆಗೆ ಅಡ್ಡಿಪಡಿಸಿದೆ. ಇ.ಎಸ್. ನಂಬೂದರಿ ಪಾಡ್ ಒಂದು ಸ್ಟೇಟ್‌ಮೆಂಟ್ ಮಾಡಿದರು. ಈ ದೇಶದಲ್ಲಿ ಯಾರೇ ಆಗಲಿ, ಎಲ್ಲೇ ಇರಲಿ they lead to the class from which they come. ಅದು ಇರುವಾಗ ನೀವು ಸ್ಟ್ರೀಮ್‌ಲೈನ್ ಹೇಗೆ ಮಾಡುತ್ತೀರಿ? ಇದು ನಮಗೆ ನಿಮಗೆ ಪಕ್ಷಾತೀತವಾಗಿ ಇದೆ. ಈ ಸದನದಲ್ಲಿ ಇರತಕ್ಕಂಥ 224 ಜನರಿಗೆ ಸಂಬಂಧಪಟ್ಟಂತಹ ವಿಚಾರ. ಈ ಅಪರಾಧ ಮಾಡಬಾರದು, ತಪ್ಪು ಮಾಡಬಾರದೆಂದು ಮನಸ್ಸು ಬರುವವರೆಗೂ ಇದಕ್ಕೆ ಅವಕಾಶಗಳು ಹಾಗೆ ಇರುತ್ತದೆ. ನಾವು ಪರಿಸ್ಥಿತಿ ಹೀಗೆ

ಇರುವಾಗ ಏನು ಮಾಡುವುದು? Casteless, creedless Society ಮಾಡಬೇಕೆಂದು ಹೊರಟು ರಾಜ್ಯಾಂಗವನ್ನು ತಂದುಕೊಂಡಿದ್ದೇವೆ. ಹೀಗೆ ಅನಿವಾರ್ಯವಾಗಿ ಮುಂದಕ್ಕೆ ಹೋಗುತ್ತದೆ. ಈಗ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಡಾ: ಬಿ. ಆರ್. ಅಂಬೇಡ್ಕರ್‌ರವರು ಇದ್ದಂತಹ ಕಾಲದಲ್ಲಿ 10 ವರ್ಷಗಳೆಂದು ಇತ್ತು. ಅದನ್ನು ನಾವೆಲ್ಲರೂ ಒಪ್ಪಿಕೊಂಡು 50 ವರ್ಷಗಳು ಹಾಗೆ ಬಂದಿದ್ದೇವೆ, ಇದು ಇನ್ನು ಎಲ್ಲಿಯವರೆಗೆ ಹೋಗುತ್ತದೆಯೋ ಗೊತ್ತಿಲ್ಲ. ಈ ರೀತಿ ವಿಚಾರವಿರುವಾಗ ನಾನು ಈ ವಿಚಾರವನ್ನು ಮಾತನಾಡಿದರೆ ನನಗೆ ತೊಂದರೆಯಾಗುತ್ತದೆಂದು ನನಗೆ ಗೊತ್ತಿದೆ. ನಾನು ಹರಿಶ್ಚಂದ್ರನ ಹಾಗೆ ಮಾತನಾಡಿದೆ, ನನಗೆ ಓಟು ಹಾಕಬಾರದೆಂದು ಹೇಳುತ್ತಾರೆ, ಅದು ನನಗೆ ಗೊತ್ತಿದೆ. ಆದರೆ ನಾವು ಇದನ್ನು ಸರಿಮಾಡುವುದು ಹೇಗೆ? ಈ ವಿಚಾರದಲ್ಲಿ ನಾವು ಹೇಗೆ ಹೋಗಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ಹೇಳುವುದಾದರೆ ಈ ವಿಷಯವಾಗಿ ಒಂದು ದೊಡ್ಡ ಡಿಬೇಟ್ ಆಗಬೇಕಾಗುತ್ತದೆ.

ಅಧ್ಯಕ್ಷರು: ಈಗ ಸಮಯವಿಲ್ಲ, ಇನ್ನು 2-3 ಬಿಲ್‌ಗಳು ಪಾಸ್ ಆಗಬೇಕಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾನು ಈಗ ಆ ವಿಷಯಕ್ಕೆ ಹೋಗುವುದಿಲ್ಲ. ಮಾನ್ಯ ಹಿರಿಯರಾದ ಕೆ. ಹೆಚ್. ರಂಗನಾಥ್‌ರವರು ಏನು ಹೇಳಿದ್ದಾರೆ, ಅದಕ್ಕೆ ಮಾನ್ಯ ಶ್ರೀ ಸುರೇಶ್ ಕುಮಾರ್‌ರವರು ನನಗೆ ಹೇಳಿದರು. Water finds its own level ಎಂದು, ಅಂದರೆ ಅವರವರ ಜಾತಿಗೆ ಸಂಬಂಧಪಟ್ಟ ಹಾಗೆ ಅವರವರು ಮಾತನಾಡುತ್ತಾರೆಂದು ಅದರ ಸಾರಾಂಶವಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಸಮಾಜದಲ್ಲಿ ಎಲ್ಲಿಯವರೆಗೆ ಅಸ್ಪೃಶ್ಯತೆ ಇರುತ್ತದೆಯೋ ಅಲ್ಲಿಯವರೆಗೆ ಈ ಮೀಸಲಾತಿಯೂ ಅನಿವಾರ್ಯವಾಗುತ್ತದೆ, ಅದನ್ನು ಕೊಡಲೇಬೇಕಾಗುತ್ತದೆ. ನಾವು ಈ ಮೀಸಲಾತಿಯ ಬಗ್ಗೆ ಮತ್ತೊಮ್ಮೆ ಚರ್ಚೆ ಮಾಡೋಣ. ಅದರ ಉಪಯೋಗ ಯಾವ ವರ್ಗದವರಿಗೆ ಆಗಿದೆ ಎನ್ನುವಂಥಾದ್ದರ ಬಗ್ಗೆ ಚರ್ಚೆ ಮಾಡೋಣ. ಈಗ ನನಗೆ ಸಮಯ ಸೀಮಿತವಾಗಿರುವುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವಂಥಾದ್ದು ಈ ಸರ್ಟಿಫಿಕೇಟ್‌ಗಳನ್ನು ಕೊಡುವಂತಹ ದಂಧೆ ಮಾಡುವುದಕ್ಕೆ ತಾವು ಈ ಕಾನೂನಿನಲ್ಲಿ ದಯಮಾಡಿ ಅವಕಾಶವನ್ನು ಕೊಡಬೇಡಿ. ಮಾನ್ಯ ಕೆ. ಹೆಚ್. ರಂಗನಾಥ್‌ರವರು ನೀವು ಏನು ಮಾಡಿದ್ದೀರಿ ಎಂದು ಕೇಳಿದರು. ನಾನು ಐದು ತಿಂಗಳುಗಳ ಕಾಲ ಸಮಾಜ ಕಲ್ಯಾಣ ಮಂತ್ರಿಯಾಗಿದ್ದೆ, ಆಗ ನನಗೆ ಮಾನ್ಯ ಬಸವಲಿಂಗಪ್ಪನವರೇ, ಆದರ್ಶವಾಗಿದ್ದರು. ಅವರೂ ಸಹ ಸಮಾಜ ಕಲ್ಯಾಣ ಸಚಿವರಾಗಿದ್ದರು. ಆಗ ಅವರು ಯೂನಿವರ್ಸಿಟಿಗಳಿಗೆ ಹೋಗಿದ್ದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಎಂದೂ ಸಮಾಜ ಕಲ್ಯಾಣ ಮಂತ್ರಿಗಳಾಗಿರಲಿಲ್ಲ. He was in the Opposition.

SRI P.G.R.SINDHIA: He was the Minister for Social Welfare. ನಾನು ಸಮಾಜ ಕಲ್ಯಾಣ ಮಂತ್ರಿಯಾಗಿದ್ದಾಗ ಯೂನಿವರ್ಸಿಟಿಗೆ ಹೋಗುತ್ತಿದ್ದೆ, ಅಲ್ಲಿ ಎಷ್ಟರಮಟ್ಟಿಗೆ ರಿಸರ್ವೇಷನ್ ಇಂಪ್ಲಿಮೆಂಟ್ ಆಗಿದೆ, ಎಷ್ಟು ಆಗಿಲ್ಲ ಎಂಬುದನ್ನು ನೋಡಿದ್ದೆ, ಮತ್ತೆ 175 ಮುನಿಸಿಪಾಲಿಟಿಗಳಿಗೆ ಹೋಗಿದ್ದೆ. ಅಲ್ಲಿ ಶೇ. 18ರಷ್ಟು ಸ್ಥಾನಗಳು ಭರ್ತಿ ಆಗುತ್ತಿವೆಯೋ, ಇಲ್ಲವೋ ಎಂಬುದನ್ನು ನೋಡುತ್ತಿದ್ದೆ. ಈ ವಿಶ್ವವಿದ್ಯಾಲಯಗಳಲ್ಲಿ ರಿಕ್ರೂಟ್‌ಮೆಂಟ್, ಅಡ್‌ಮಿಷನ್‌ಗಳು, ಹೀಗೆ ಪ್ರತಿಯೊಂದನ್ನು ನಾನು ವೆರಿಫೈ ಮಾಡಿದ್ದೆ. ಮತ್ತೆ ಈ ಸಮಾಜ ಕಲ್ಯಾಣ ಆಫೀಸ್‌ನಲ್ಲಿ ಡಿಸ್ಟ್ರಿಕ್ಟ್ ಆಫೀಸರ್ಸ್ ಯಾರಿದ್ದಾರೆ, ಅಲ್ಲಿ ಎಷ್ಟು ಕೇಸ್‌ಗಳು ವೆರಿಫಿಕೇಷನ್ ಆಗುವಂಥಾದ್ದು ಪೆಂಡಿಂಗ್ ಇದೆ, ಇದು 6 ತಿಂಗಳು, 1 ವರ್ಷ, 2 ವರ್ಷಗಳ ಕಾಲ ಈ ಕೇಸನ್ನು ಏಕೆ ಪೆಂಡಿಂಗ್‌ನಲ್ಲಿ ಇಟ್ಟಿದ್ದಾರೆಂಬುದನ್ನು ನೋಡಿದರೆ ನೀವು ಈ ಆಡಳಿತವನ್ನು ಬಿಗಿ ಮಾಡಬಹುದು. ನಾನು ಮೊನ್ನೆ ಸ್ಟಾರ್ ನ್ಯೂಸ್‌ನಲ್ಲಿ ನೋಡಿದೆ, ಅದರಲ್ಲಿ ಸರ್ಕಾರದ ಉನ್ನತ ಆಡಳಿತಾಧಿಕಾರಿಯೊಬ್ಬರು ಕರ್ನಾಟಕ ರಾಜ್ಯದ 175 ತಾಲ್ಲೂಕುಗಳ ಲ್ಯಾಂಡ್ ರೆಕಾರ್ಡ್ಸ್ ಅನ್ನು ಕಂಪ್ಯೂಟರ್ ಮಾಡಿದ್ದೇವೆಂದು ಹೇಳಿದರು. ರೈತರು ಬಂದು ಕಂಪ್ಯೂಟರ್ ಅನ್ನು ಒತ್ತಿದರೆ ತಕ್ಷಣ ಅವರಿಗೆ ಎಲ್ಲಾ ಮಾಹಿತಿಗಳು ದೊರೆಯುತ್ತದೆಂದು ದೊಡ್ಡ ಪ್ರಚಾರವನ್ನು ಮಾಡಿದರು. ಇದನ್ನು ರಾಮನಗರ ತಾಲ್ಲೂಕಿನಲ್ಲೂ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಇದನ್ನು ಎಲ್ಲಾ ತಾಲ್ಲೂಕುಗಳಲ್ಲೂ ಮಾಡುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಅನೇಕ ಸಂದರ್ಭಗಳಲ್ಲಿ ಒತ್ತು ಕೊಟ್ಟು ಹೇಳಿದ್ದಾರೆ. ಅದೇ ರೀತಿಯಲ್ಲಿ ಇದನ್ನು ಮಾಡಿ, ಇದು ಬಹಳ ಮುಖ್ಯವಾಗಿ ಆಗಬೇಕಾಗಿರುವಂಥಾದ್ದು, ಇದನ್ನು ನೀವು ಸ್ಟ್ರೀಮ್‌ಲೈನ್ ಮಾಡಿಲ್ಲ. ಇನ್ನು ಮತ್ತೊಂದು ವಿಚಾರವೇನೆಂದರೆ ಇವತ್ತು ಇನ್‌ಕಂ ಲಿಮಿಟ್ ಅದು 8 ಸಾವಿರ ರೂ, 10 ಸಾವಿರ, 15 ಸಾವಿರ ರೂಪಾಯಿಗಳು. ಈ ಇನ್‌ಕಂ ಸರ್ಟಿಫಿಕೇಟ್ ಎನ್ನುವಂಥಾದ್ದು it is a farce. ಯಾರು ಎಷ್ಟು ಬೇಕಾದರೂ ಮಾಡಬಹುದು, ತಾವು ಬೇಕಾದರೆ ಇದು ತೆಗೆದು ಹಾಕಿ. ಸರ್ಕಾರಿ ನೌಕರರ ವರ್ಗ ಮತ್ತು ಇನ್‌ಕಂ ಟ್ಯಾಕ್ಸ್ ಕಟ್ಟುವವರನ್ನು ಬಿಟ್ಟು ಇನ್ನು ಬಾಕಿ ಇರುವವರಿಗೆ ಇನ್‌ಕಂ ಸರ್ಟಿಫಿಕೇಟ್ ಏಕೆ ಬೇಕು? ಈ ರೀತಿಯ ಸ್ಟ್ರೀಮ್‌ಲೈನ್ ಮಾಡುವುದಕ್ಕಿಂತ ಮುಂಚೆ ತಾವು ಭ್ರಷ್ಟಾಚಾರವನ್ನು ತೆಗೆಯಬೇಕೆಂದು ಹೊರಟಿದ್ದೀರಿ, ಆದರೆ ಇದು ಹೆಚ್ಚು ಮಾಡುವಂಥಾದ್ದಕ್ಕೆ ಅಧಿಕಾರಿಗಳಿಗೆ ಅವಕಾಶವಾಗುತ್ತದೆ. ಆದುದರಿಂದ ಇದನ್ನು ಪುನರ್ ವಿಮರ್ಶೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಕೆ.ಶ್ರೀನಿವಾಸ ಗೌಡ(ಕೋಲಾರ): ಮಾನ್ಯ ಅಧ್ಯಕ್ಷರೇ, ನನಗಿಂತ ಮುಂದೆ

ಮಾತನಾಡಿದವರೆಲ್ಲರೂ ಎಸ್‌ಸಿ/ಎಸ್‌ಟಿ ಸರ್ಟಿಫಿಕೇಟ್ ಬಗ್ಗೆ ಮಾತ್ರ ಮಾತನಾಡಿದರು. ನಾನು ಬಹಳ ಮುಖ್ಯವಾಗಿ ಮುಸಲ್ಮಾನರ ಸರ್ಟಿಫಿಕೇಟ್ ಬಗ್ಗೆ ಹೇಳುವುದೇನೆಂದರೆ, ಇವರಲ್ಲಿ ಲಾಳ, ಪೂಲಾರಿ, ಫಕೀರ, ಎಂಬ ಕಾಸ್ಟ್‌ಗಳಾಗಿರುವುದರಿಂದ ಅವರಲ್ಲಿ ಸ್ವಲ್ಪ ರಿಜರ್ವೇಷನ್ ಇದೆ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೇ, ತಾವು ಎಸ್‌ಸಿ/ಎಸ್‌ಟಿ ಸರ್ಟಿಫಿಕೇಟ್ ಬಗ್ಗೆ ಮಾತನಾಡಿ, ಮುಸಲ್ಮಾನರ ಸರ್ಟಿಫಿಕೇಟ್ ಬಗ್ಗೆ ಮಾತನಾಡುತ್ತಿದ್ದೀರಲ್ಲಾ......

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೇ, ಈ ಬಿಲ್‌ನಲ್ಲಿ ಹಿಂದುಳಿದ ವರ್ಗದವರ ಬಗ್ಗೆ ಇದೆ, ಅದನ್ನೇ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ತಾವು ದಯಮಾಡಿ ಸಬ್ಜೆಕ್ಟ್‌ಗೆ ಬನ್ನಿ. it has been sufficiently discussed.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಇವರಿಗೆ ಏನಾಗಿದೆ ಎಂದರೆ ಕಳೆದ 10 ವರ್ಷಗಳಿಂದ ರಿಜರ್ವೇಷನ್ ಇದೆಯೋ, ಇಲ್ಲವೋ ಎಂದು ಗೊತ್ತಾಗಿರಲಿಲ್ಲ. ಆಗ ಎಲ್ಲರೂ ಮುಸಲ್ಮಾನರು ಎಂದು ಬರೆಸಿದರು. ಈಗ ರಿಜರ್ವೇಷನ್ ಬಂದ ಮೇಲೆ ಕಾಲೇಜುಗಳಲ್ಲಿ, ಶಾಲೆಗಳಲ್ಲಿ ಅದರಲ್ಲೂ ಟೀಚರ್‌ಗಳ ನೇಮಕಾತಿಯ ಸಮಯದಲ್ಲಿ ಅವರಿಗೂ ಸ್ವಲ್ಪ ಅವಕಾಶ ಸಿಕ್ಕಿದೆ. ಇಂತಹ ಪರಿಸ್ಥಿತಿಯಲ್ಲಿ ತಾಲ್ಲೂಕು ಆಫೀಸ್‌ಗಳಲ್ಲಿ ಬೇರೆ ಬೇರೆ ರೀತಿಯ ನಮೂನೆಗಳಲ್ಲಿ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿ ಬಂತು. ನಾವು ಜನಗಣತಿ ಎಂದು ಸರ್ಕಾರದಿಂದ ಮಾಡುತ್ತೇವೆ, ಆಗ ಇದನ್ನು ಏಕೆ ಮಾಡಲಿಲ್ಲ? ನಾನು ಇದರಲ್ಲಿ ಆ ಸರ್ಕಾರ ಈ ಸರ್ಕಾರವೆಂದು ಹೇಳುವುದಿಲ್ಲ. ಇಲ್ಲಿ ಬಹಳ ಮುಖ್ಯವಾಗಿ ಹೇಳುವ ವಿಷಯವೆಂದರೆ ಜನಗಣತಿಯಲ್ಲಿ ಲಾಳ ಜನಾಂಗದವರು ಎತ್ತುಗಳಿಗೆ ಲಾಳ ಹೊಡೆಯುವವನು, ಪುಲಾರಿ ಎಂದರೆ ಹೂ ಕಟ್ಟುವವನು ಎಂದು ಆಗಲೇ ಬಂದಿದ್ದರೆ, ಅವರ ಮಕ್ಕಳಿಗೆ ಅನುಕೂಲವಾಗುತ್ತಿತ್ತು. ಈ ರೀತಿಯ ಸರ್ಟಿಫಿಕೇಟ್ ಇಲ್ಲದೇ ಇದ್ದುದ್ದರಿಂದ ಅವರಿಗೆ ತೊಂದರೆಯಾಯಿತು. ಆದುದರಿಂದ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯರು, ಇದರಲ್ಲಿ ಬಹಳ ವಿಷಯಗಳು ಅಡಗಿದೆ, ಮತ್ತೆ ಇದರಿಂದ ಅಧಿಕಾರಿಗಳಿಗೂ ಕಷ್ಟವಾಗುತ್ತದೆ. ಇವರು ಲಾಳದವರಿಗೆ, ಪುಲಾರಿಯವರಿಗೆ ಸರ್ಟಿಫಿಕೇಟ್‌ಗಳನ್ನು ಕೊಡಬೇಕೆಂದರೆ ಕಷ್ಟವಾಗುತ್ತದೆ. ಆದುದರಿಂದ ಇದನ್ನು ಯಾವ ರೀತಿಯಾಗಿ ಮಾಡಬೇಕೆಂಬುದನ್ನು ನೋಡಬೇಕು. ತಾವು ಮುಸಲ್ಮಾನರಿಗೆ ಈ ಸರ್ಟಿಫಿಕೇಟ್ ಕೊಡುವಂತಹ ವಿಚಾರವನ್ನು ಗಮನಿಸಬೇಕು. ಇನ್ನು ಮಾನ್ಯ ಮಂತ್ರಿಯವರಿಗೆ ಬ್ಯಾಕ್‌ವರ್ಡ್ ಆಫೀಸರ್ ಬಗ್ಗೆ ಹೇಳಿದ್ದೇನೆ. ಇವರು ನೂರಕ್ಕೆ ತೊಂಬತ್ತು ಭಾಗ ಫ್ರಾಡ್ ಮಾಡಿದರು. ಅವರ ಮೇಲೆ

ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ತಾವು ಇದರ ಬಗ್ಗೆ ಕ್ರಮ ಜರುಗಿಸಬೇಕು. ಇವತ್ತು ಡಿವಿಜನಲ್ ಆಫೀಸ್ ಅನ್ನು ಮುಚ್ಚುವುದಕ್ಕೆ ಒಬ್ಬ ಸೆಕ್ರೆಟರಿ ಗ್ರೇಡ್‌ನವರನ್ನು ಹಾಕಿ ಅದನ್ನು ಮುಚ್ಚುವಂತೆ ಮಾಡಿದ್ದೀರಿ. ಇಂತಹ ಯಾರಾದರೂ ಒಬ್ಬ ಸೆಕ್ರೆಟರಿಯನ್ನು ಹಾಕಿ ಈ ನಾಲ್ಕು ಡಿವಿಜನಲ್ ಆಫೀಸ್‌ಗಳನ್ನು ಮುಚ್ಚುವುದಕ್ಕೆ ನೇಮಕ ಮಾಡಿದ್ದೀರಿ, ಇದಕ್ಕೂ ಯಾರನ್ನಾದರೂ ಹಾಕಿ ಸ್ಕ್ರೀಮ್‌ಲೈನ್ ಮಾಡುವುದಕ್ಕೆ ಒಬ್ಬ ಅಧಿಕಾರಿಯನ್ನು ಹಾಕಿ ಎಂದು ಹೇಳುತ್ತೇನೆ. ಇನ್ನು ಎಸ್‌ಸಿ/ಎಸ್‌ಟಿ ಬಡ ಜನಾಂಗದವರು ಇವರು ತಹಶೀಲ್ದಾರರ ಹತ್ತಿರ, ರೆವಿನ್ಯೂ ಇನ್‌ಸ್ಪೆಕ್ಟರ್ ಹತ್ತಿರ, ವಿಲೇಜ್ ಅಕೌಂಟೆಂಟ್ ಹತ್ತಿರ ಹೋಗುತ್ತಾರೆ. ಈ ವಿಲೇಜ್ ಅಕೌಂಟೆಂಟ್ ಎಲ್ಲೋ ಒಂದು ಪಟ್ಟಣದಲ್ಲಿ ರೂಮ್ ಮಾಡಿರುತ್ತಾನೆ. ಅವನ ರೂಮ್‌ಗೆ ಇವರು ಹೋಗಿ ಕೈ ಕಟ್ಟಿಕೊಂಡು ನಿಂತು ಕೊಳ್ಳುವುದನ್ನು ನೋಡಿದರೆ ಈ ಪರಿಸ್ಥಿತಿ ಯಾರಿಗೂ ಬೇಡವೆನಿಸುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಖಾತೆಯ ಮಂತ್ರಿಗಳಾಗಿದ್ದಾರೆ. ಇದನ್ನು ನಿಲ್ಲಿಸುವಂಥಾದ್ದರ ಬಗ್ಗೆ ಚಿಂತನೆ ಮಾಡಿದರೆ ಅನುಕೂಲವಾಗುತ್ತದೆ. ಇನ್ನು ಒಂದು ಸಾರಿ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡ ಮೇಲೆ ಅದನ್ನು ಪ್ರತಿವರ್ಷ ಏಕೆ ಮತ್ತೆ ಮತ್ತೆ ಕೇಳಬೇಕು? ತಾವು ಇದನ್ನೂ ಸಹ ಯೋಚನೆ ಮಾಡಬೇಕು. ಒಂದು ಸಾರಿ ಸರ್ಟಿಫಿಕೇಟನ್ನು ತೆಗೆದುಕೊಂಡ ಮೇಲೆ ಅದನ್ನು 5ವರ್ಷ, 10 ವರ್ಷಗಳ ಟೈಮ್ ಲಿಮಿಟ್ ಮಾಡಿ ಎಂದು ಹೇಳುತ್ತೇನೆ. ಇದು ನಿಂತರೆ ಮಾತ್ರ ಬಡವರಿಗೆ ಅನುಕೂಲವಾಗುವುದೆಂದು ಹೇಳುತ್ತೇನೆ. ಈ ಸರ್ಟಿಫಿಕೇಟ್‌ಗಳು ಬಹಳ ಸುಲಭವಾಗಿ ದೊರೆಯುವಂತಾಗಬೇಕು. ಇದನ್ನು ಪಡೆಯಲು ಓಡಾಡುವವರಿಗೆ ಅದರ ಕಷ್ಟ ಗೊತ್ತಾಗುತ್ತದೆ, ಅವರು ನಮಗೆ ಹೇಳಿದರೆ ಎಷ್ಟು ಕಷ್ಟ ಇದೆ ಎಂಬುದು ಗೊತ್ತಾಗುತ್ತದೆ. ಇಲ್ಲದಿದ್ದರೆ ಗೊತ್ತಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ಯೋಚಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಯೋಗೀಶ್‌ಭಟ್‌ರವರೇ, ಮಾತನಾಡಿ,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಪ್ರತಿಯೊಬ್ಬರೂ ಪ್ರತಿಯೊಂದು ಬಿಲ್ ಮೇಲೆ ಮಾತನಾಡಬೇಕೆಂದರೆ ಹೇಗೆ? ನೀವೇ ಯಾರ್‍ಯಾರು ಯಾವ್ಯಾವ ಬಿಲ್ ಮೇಲೆ ಮಾತನಾಡಬೇಕೆಂದು ಡಿವೈಡ್ ಮಾಡಿಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಒಂದು ಬಿಲ್ ಮೇಲೆ ಇಂತಿಷ್ಟೇ ಸದಸ್ಯರು ಮಾತನಾಡಬೇಕೆಂದು ಇತಿಮಿತಿ ಏನಾದರೂ ಇದೆಯಾ?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕ್ರಾಸ್ ಎಕ್ಸಾಮಿನ್ ಮಾಡುವುದಕ್ಕೆ ಎದ್ದು ನಿಂತಿದ್ದಾರೆ. ಪ್ರತಿಯೊಂದಕ್ಕೂ ಇತಿಮಿತಿ ಇರಬೇಕು, ಈ ರೀತಿ ಆದರೆ ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ, ಏಕೆಂದರೆ ಪ್ರತಿಯೊಂದು ಬಿಲ್‌ಗೂ ಇಷ್ಟು ಟೈಮ್ ಎಂದು ನಿಗದಿ ಮಾಡಿರುತ್ತೀರಿ, ಈ ಸದನ ಅದಕ್ಕೆ ಒಪ್ಪಿಗೆಯನ್ನು ಕೊಡುತ್ತದೆ. ಆದರೆ ಮಾನ್ಯ ಸದಸ್ಯರು ಎದ್ದು ನಿಂತು ಇತಿಮಿತಿ ಇದೆಯೇ ಎಂದು ಕೇಳಿದರೆ ಹೇಗೆ? ಇದು ಉದ್ಧಟತನದ ಪರಮಾವಧಿ.....

(ಗೊಂದಲ)

೪.೪೦ ಪಿ.ಎಂ.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಮಾತನಾಡಲು ಅವಕಾಶ ಕೊಡಿ ಎಂದು ಕೇಳಿದ್ದಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವರ ಬಗ್ಗೆ ಉದ್ಧಟತನವೆಂದು ಹೇಳುವುದು ಸರಿಯಲ್ಲ. ಅವರ ಸ್ಥಾನಕ್ಕೆ ಗೌರವ ತರುವ ಶಬ್ಧ ಇದಲ್ಲ, ಅವರು ತಾಳ್ಮೆಯನ್ನು ಕಳೆದುಕೊಳ್ಳಬಾರದು.

ಅಧ್ಯಕ್ಷರು: ಯಾರ‍್ಯಾರು ಯಾವ್ಯಾವ ವಿಷಯಗಳಲ್ಲಿ ಪರಿಣಿತರಾಗಿರುತ್ತಾರೋ ಅವರು ಮಾತನಾಡಲಿ, ಒಂದು ವಿಧೇಯಕದ ಮೇಲೆ ಎಲ್ಲರೂ ಮಾತನಾಡಬೇಕೆಂದರೆ, ಕಾಲಾವಕಾಶ ಹೇಗೆ ಕೊಡಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರಾದ ನೀವಾದರೂ ಎದ್ದು ನಿಂತು, ಅಧ್ಯಕ್ಷರ ಬಗ್ಗೆ ಈ ರೀತಿ ಮಾತನಾಡಬಾರದೆಂದು ಸೌಜನ್ಯಪೂರ್ವಕವಾಗಿಯಾದರೂ ಹೇಳಬೇಕಾಗಿತ್ತಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನನಗೆ ಮಾತನಾಡಲು ಅವಕಾಶ ಕೊಡುವುದು ಬೇಡ. ಮಾನ್ಯ ಸದಸ್ಯರಾದ ಯೋಗಿಶ್ ಭಟ್‌ರವರು ಮಾತನಾಡಲು ಅವಕಾಶ ಕೊಡಿ, ನಂತರ ಅವರಿಗೆ ಉತ್ತರ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ಹೇಳುವ ವಿಧಾನದಲ್ಲಿ ಹೇಳಬೇಕು.

ಅಧ್ಯಕ್ಷರು: ಹೆಗಡೆಯವರೆ ಮತ್ತೊಂದು ವಿಧೇಯಕದ ಮೇಲೆ ನೀವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ತಾವು ಹೇಳಿದ್ದನ್ನು ಈಗ ಶಿರಸಾ ವಹಿಸಿ ನಾವು ಪಾಲಿಸುತ್ತೇವೆ......

(ಗೊಂದಲ)

ಅಧ್ಯಕ್ಷರು: ಹೆಗಡೆಯವರೆ ನಿನ್ನೆಯ ದಿವಸ ಫ್ಲೋರ್ ಲೀಡರ್ಸ್ ಕರೆಯಿಸಿ ಟೈಂ ಲಿಮಿಟ್ ಇಟ್ಟು ನಾನು ಕೇಳಿದೆ, ಅದಕ್ಕೆ ನೀವು ಏನು ಹೇಳಿದಿರಿ? ಅದೇನು, ಐದು ಐದು ಮುಗಿದು ಹೋಗುತ್ತದೆ ಎಂದು ನಿನ್ನೆ ದಿವಸ ತಾವೇ ಹೇಳಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಒಂದು ಬಿಲ್ ಮೇಲೆ ಎಷ್ಟು ಜನ ಮಾನ್ಯ ಸದಸ್ಯರು ನಮ್ಮ ಪಕ್ಷದ ಪತಿಯಿಂದ ಮಾತನಾಡಬೇಕೆಂದು ನಿರ್ಧಾರ ಮಾಡಿ ಹೇಳಿ.

ಅಧ್ಯಕ್ಷರು: ಅದನ್ನು ನಾವು ಹೇಳುವುದಕ್ಕಾಗುವುದಿಲ್ಲ, ಒಬ್ಬರು ಇಬ್ಬರು ಮಾತನಾಡಬಹುದಷ್ಟೆ, ಅದಕ್ಕಿಂತ ಹೆಚ್ಚು ಸದಸ್ಯರು ಮಾತನಾಡಲಾಗುವುದಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯೋಗೀಶ ಭಟ್‌ರವರು ಮಾತನಾಡಲು ಬಹಳ ಸಿದ್ಧತೆ ಮಾಡಿಕೊಂಡು ಬಂದಿದ್ದಾರೆ, ಅವರಿಗೆ ಎರಡು ಮೂರು ನಿಮಿಷ ಮಾತನಾಡಲು ಅವಕಾಶ ಕೊಡಬಹುದು.

ಅಧ್ಯಕ್ಷರು: ಆಯಿತು.

ಶ್ರೀ ಜಗದೀಶ ಶೆಟ್ಟರ್: ನಾವು ಸಾಕಷ್ಟು ಸಾರಿ ನೋಡಿದ್ದೇವೆ, ಇಲ್ಲಿಯವರೆಗೆ ಮಾನ್ಯ ಮುಖ್ಯಮಂತ್ರಿಗಳು ತಾಳ್ಮೆಯನ್ನು ಕಳೆದುಕೊಂಡಿರಲಿಲ್ಲ, ಇವತ್ತು ಏತಕ್ಕೆ ತಾಳ್ಮೆ ಕಳೆದುಕೊಂಡರೊ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಮಾನ್ಯ ಸಭಾಧ್ಯಕ್ಷರಿಗೆ ಇಷ್ಟೇ ಜನ ಇಷ್ಟೇ ಹೊತ್ತು ಮಾತನಾಡಬೇಕೆಂದು ಎಲ್ಲಿ ಬರೆದಿದೆ ಎಂದು ಕೇಳಿದರು, ಸ್ವಾಭಾವಿಕವಾಗಿ ಅದನ್ನು ಕೇಳಬಾರದಿತ್ತು, ಅಥವಾ ನೀವಾದರೂ ತಡೆಹಿಡಿಯಬಹುದಾಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಏಕೋ ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯಿಂದ ಸ್ವಲ್ಪ ಸಿಟ್ಟು ಮಾಡಿಕೊಂಡಿದ್ದಾರೆ. ನಿನ್ನೆ ಬಿಜೆಪಿಯವರ ಬಗ್ಗೆ ಅವರಿಗೆ ಬಹಳ ಅಭಿಮಾನವಿತ್ತು.

ಶ್ರೀ ಎಸ್.ಎಂ.ಕೃಷ್ಣ: ನಿನ್ನೆಯ ದಿವಸ ಎರಡು ಮನೆಗಳಲ್ಲೂ ಕೂಡ ನೀವೆಲ್ಲಾ ಸೇರಿ ಅನುದಾನಕ್ಕೆ ಒಪ್ಪಿಗೆಯನ್ನು ಸೂಚಿಸಿದ್ದೀರಿ, ನಾನು ಪ್ರಸನ್ನವಾಗಿರಬೇಕು ಕೋಪ ಮಾಡಿಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ಇನ್ನು ಸಭಾತ್ಯಾಗ ಪಾರ್ಲಿಮೆಂಟರಿ ನಡವಳಿಕೆಯ ಒಂದು ಭಾಗ. ಅದಕ್ಕೆ ಯಾರೂ ಅಬ್ಜೆಕ್ಷನ್ ಮಾಡುವುದಿಲ್ಲ. ಯಾರೂ ಪ್ರತಿರೋಧ ವ್ಯಕ್ತಪಡಿಸುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಮುಖ್ಯಮಂತ್ರಿಗಳನ್ನು ನಿನ್ನೆಯಿಂದ ನಾವು ನೋಡುತ್ತಿದ್ದೇವೆ, ಕಳೆದ ಆರು ತಿಂಗಳಲ್ಲಿ ಅವರು ಯಾವತ್ತೂ ಕೂಡ ತಾಳ್ಮೆಯನ್ನು ಕಳೆದುಕೊಂಡಿರಲಿಲ್ಲ ಹಾಗೂ ವ್ಯಂಗ್ಯವಾಗಿ ಚುಚ್ಚು ಮಾತನಾಡುವುದನ್ನು ಬಹಳ ಕಡಿಮೆ ಮಾಡಿದ್ದರು, ಲವಲವಿಕೆಯಿಂದ ನಮಗೆಲ್ಲಾ ಉತ್ತರವನ್ನು ಕೊಡುತ್ತಿದ್ದರು. ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಎರಡನೆಯ ಬಾರಿ ಆಯ್ಕೆಯಾಗಿದ್ದು ಅವರ ಸ್ವಭಾವವೆ ಹಾಗಿರಬಹುದು. ಗುರುಸ್ವಾಮಿಯವರು, ಏನ್ರಿ ಸಿಂಧ್ಯಾರವರೆ, ನಿಮ್ಮ ಗಂಟಲು ಅಷ್ಟು ದೊಡ್ಡದಾಗಿದೆ ಎಂದು ಕೇಳಿದರು. ಕೆಲವು ಪತ್ರಿಕೆಗಳಲ್ಲಿ ಸಿಂಧ್ಯಾರವರು ದುರ್ಯೋಧನನ ರೀತಿ ಮಾಡನಾಡುತ್ತಾರೆಂದು ಬರೆದರು, ಅದು ನನ್ನ ಸ್ವಭಾವ. ಮಾನ್ಯ ಮುಖ್ಯಮಂತ್ರಿಗಳು ಉದ್ಧಟತನವೆಂದು ಹೇಳಿದಾಗ ಆ ಸದಸ್ಯರ ಕ್ಷೇತ್ರದ ಹಾಗೂ ರಾಜ್ಯದ ಜನತೆ ಏನು ತಿಳಿದುಕೊಳ್ಳುತ್ತಾರೆಂದರೆ, 'ಏನಪ್ಪ, ಒಬ್ಬರು ಶಾಸಕರಾಗಿದ್ದುಕೊಂಡು ಈ ರೀತಿ ಸಭಾಧ್ಯಕ್ಷರ ಕುರಿತು ಮಾತನಾಡಿದರು' ಎಂದು ತಿಳಿದುಕೊಳ್ಳಬಹುದು, ತಾವು ಸಭಾನಾಯಕರಾಗಿ ಆ ರೀತಿ ಹೇಳುವುದು ಉಚಿತವಾಗಿ ಕಾಣುವುದಿಲ್ಲವೆಂದು ನನಗನ್ನಿಸುತ್ತದೆ. ನಿನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರೆಂದರೆ ಸೌತೆಕಾಯಿ ಕಹಿ ಇದ್ದರೆ ಕಹಿ ಭಾಗವನ್ನು ಮಾತ್ರ ಬಿಸಾಕಿ ಸೌತೆಕಾಯಿಯನ್ನು ಮಾತ್ರ ತಿನ್ನುತ್ತೇವೆಂದು ಹೇಳಿದರು. ಆದುದರಿಂದ ಸೌತೆಕಾಯಿ ಕಹಿ ಎಂದು ಬಿಸಾಕುವುದರ ಬದಲಾಗಿ ಕಹಿಯನ್ನು ಏತಕ್ಕೆ ತೆಗೆದುಕೊಳ್ಳುತ್ತೀರಿ? ಈ ತಿಂಗಲ 16ನೇ ತಾರೀಖು ಅಧಿವೇಶನ ಆರಂಭವಾಯಿತು, 31ನೇ ತಾರೀಖಿನೊಳಗೆ ಅನುದಾನಕ್ಕೆ ಒಪ್ಪಿಗೆ ಸಿಗಬೇಕೆಂದು ಹೇಳಿದರು. ನಾವೆಲ್ಲಾ ಅದನ್ನು ಮಾಡಿಕೊಟ್ಟಿದ್ದೇವೆ. ಇನ್ನು ನಾಲ್ಕೈದು ದಿವಸ ಸದನವಿರುತ್ತದೆ, ಸಾಕಷ್ಟು ಬಿಲ್‌ಗಳಿವೆ, ಸಾಕಷ್ಟು ಇಂಪ್ಲಿಕೇಷನ್ಸ್ ಇರುತ್ತವೆ, ನಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿರುವವರು, ಪ್ರಾಕ್ಟಿಕಲ್ ಆಗಿ ಬಿಡಿಒ, ತಹಸಿಲ್ದಾರ್ ಕಛೇರಿಗಳಲ್ಲಿ ತೊಂದರೆಗಳೇನಿರುತ್ತವೆಂದು ಅವರ ಕಡೆಯ ಸದಸ್ಯರಿಗೆ ಮಾತನಾಡಬೇಕೆಂದರು, ಪಾಪ ಮಾತನಾಡುವುದಕ್ಕಾಗುವುದಿಲ್ಲ, ಸಾಮಾನ್ಯವಾಗಿ ಆಡಳಿತ ಪಕ್ಷದವರು ಮಾತನಾಡುವುದು ಕಡಿಮೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಿಟ್ಟನ್ನು ಕಡಿಮೆ ಮಾಡಿಕೊಂಡರೆ ಅವರ ಕ್ಷೇತ್ರದ ಜನತೆಯ ಮುಂದೆ ವ್ಯಕ್ತಿತ್ವಕ್ಕೆ ದಕ್ಕೆಯಾಗುತ್ತದೆ, ದಯವಿಟ್ಟು ಅಷ್ಟೊಂದು ಬಿಗಿಯಾಗಿ ಉದ್ಧಟತನವೆಂದು ಹೇಳಿದರೆ ಹೇಗೆ ಸ್ವಾಮಿ?

ಶ್ರೀ ಜಗದೀಶ್ ಶೆಟ್ಟರ್: ನಾನು ಆಗಲೇ ಹೇಳಿದೆ, ಕಳೆದ ಒಂದೂವರೆ ವರ್ಷದಿಂದ ನೋಡುತ್ತಾ ಬಂದಿದ್ದೇವೆ. ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಆ ರೀತಿಯಾಗಿ ಅವರ ಬಾಯಿಯಯಲ್ಲಿ ಒಮ್ಮೆಲೆ ಏತಕ್ಕೆ ಹಾಗೆ ಬಂತೋ ಅರ್ಥವಾಗಲಿಲ್ಲ. ಆದುದರಿಂದ ಜನತೆಗೆ ರಾಂಗ್ ಸಿಗ್ನಲ್ ಹೋಗುವಂತಾಗಬಾರದು. ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸಭಾನಾಯಕರ

ಸ್ಥಾನಮಾನದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಬಾಯಿಯಲ್ಲಿ ಈ ಶಬ್ದ ಬರಬಾರದೆಂಬುದು ನನ್ನ ಕಳಕಳಿಯೂ ಆಗಿದೆ, ಆ ಬಗ್ಗೆ ದಯವಿಟ್ಟು ಒಂದು ಸ್ಪಷ್ಟೀಕರಣವಾದರೆ ಒಳ್ಳೆಯದು.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು 'ನಾನು ಮಾತನಾಡಿದರೆ ದುರ್ಯೋಧನನ ಪಾತ್ರ ಮಾಡಿದಂತಾಗುತ್ತದೆಂದು ಹೇಳಿದರು, ನನಗೆ ಆ ಶಕ್ತಿ ಇಲ್ಲ, ನಾನೇನಾದರೂ ಶ್ರೀಕೃಷ್ಣನ ಪಾತ್ರವನ್ನು ವಹಿಸುವುದಕ್ಕೆ ಮಾತ್ರ ಸಾಧ್ಯ. ಮಾನ್ಯ ವಿಶ್ವೇಶ್ವರ ಹೆಗಡೆಯವರು ಸೇರಿದಂತೆ ಎಲ್ಲರಿಗೂ ಹೊಂದಿಕೊಂಡು ನಾನು ಹೋಗಬೇಕಾಗುತ್ತದೆ. ಅವರು ವಯಸ್ಸಿನಲ್ಲಿ ಬಹಳ ಕಿರಿಯರಿದ್ದಾರೆ. ಮಾನ್ಯ ಸಭಾಧ್ಯಕ್ಷರೂ ಕೂಡ ವಯಸ್ಸಿನಲ್ಲಿ ಬಹಳ ಅವರಿಗಿಂತ ಹಿರಿಯರಿದ್ದಾರೆ. ಅವರ ಸಮಕಾಲೀನರಲ್ಲ, ಸಮಕಾಲೀನರಿದ್ದರೂ ಕೂಡ ಮಾನ್ಯ ಸಭಾಧ್ಯಕ್ಷರನ್ನು ಪ್ರಶ್ನೆ ಮಾಡುವುದು ತರವಲ್ಲ. ಸಾಧುವಲ್ಲವೆಂಬುದು ಅದರ ಬಗ್ಗೆ ನಮ್ಮ ನಿರ್ಧಿಷ್ಟವಾದ ಅಭಿಪ್ರಾಯ. ಆದರೆ ಮಾನ್ಯ ಸಭಾಧ್ಯಕ್ಷರನ್ನು ಕೇಳುವಂತಹ ಧಾಟಿ ನನಗೆ ತುಂಬಾ ನೋವನ್ನುಂಟು ಮಾಡಿತು. ಆದುದರಿಂದ ನಾನು ಆ ಪದವನ್ನು ಉಪಯೋಗಿಸಿದೆ. ನಾನೂ ಕೂಡ ಕೂಡ 1962-67ರವರೆಗೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಕುಳಿತುಕೊಳ್ಳುವ ಜಾಗದಲ್ಲಿ ಕುಳಿತಿದ್ದೆ, ದಯವಿಟ್ಟು ಮಾನ್ಯ ನನ್ನ ಸ್ನೇಹಿತರಾದ ಹೆಗಡೆಯವರು ಆ ಕಾಲದ ಡಿಬೇಟ್ಸ್ ಅನ್ನು ಸ್ವಲ್ಪ ಓದಿದರೆ, ಅಧ್ಯಕ್ಷರಿಗೆ ಯಾವ ಪ್ರಮಾಣದ ಮರ್ಯಾದೆಯನ್ನು ಕೊಡುತ್ತಿದ್ದೇವೆಂಬುದು ತಿಳಿಯುತ್ತದೆ. ಏಕೆಂದರೆ, ಇವರಿಗಿಂತ ಬಹಳ ತೀಕ್ಷ್ಣವಾಗಿದ್ದಂಥ ನಮ್ಮ ದಿವಂಗತ ವೈಕುಂಠ ಬಾಳಿಗರವರು ಆಗ ಅಧ್ಯಕ್ಷರಾಗಿದ್ದರು. ತಮ್ಮ ಕ್ಷಮೆ ಕೋರಿ ಹೇಳುತ್ತೇನೆ. ಆಗ ನಮ್ಮ ಚರ್ಚೆಗಳು ಬಹಳ ತೀವ್ರವಾಗಿ ನಡೆಯುತ್ತಿತ್ತು, ಪ್ರತಿಯೊಂದು ಸದನವು ಕೂಡ ತನ್ನದೇ ಆದ ವ್ಯಕ್ತಿತ್ವವನ್ನು ಬಿಟ್ಟು ಹೋಗುತ್ತದೆ. ಆದುದರಿಂದ ಇನ್ನೂ ಹತ್ತಾರು ವರ್ಷಗಳವರೆಗೆ ಸಾರ್ವಜನಿಕ ಜೀವನದಲ್ಲಿರಬೇಕಾದವರು, ಅಧ್ಯಕ್ಷರ ಸ್ಥಾನಕ್ಕೆ ಪರಂಪರಾನುಗತವಾದಂಥ ಮರ್ಯಾದೆಯನ್ನು ಕೊಡುವುದು ನಿಮ್ಮ ಮುಂದಿನ ದಿವಸಗಳ ಪಾರ್ಲಿಮೆಂಟರಿ ಜೀವನದ ದೃಷ್ಟಿಯಿಂದ ತುಂಬಾ ಅವಶ್ಯಕವೆನ್ನುವ ದೃಷ್ಟಿಯಿಂದ ನಾನು ಸ್ವಲ್ಪ ಕೋಪದಿಂದ ನುಡಿದಿದ್ದೇನೆ, ಅನ್ಯತಾ ಭಾವಿಸಬಾರದು, ಒಂದು ರೀತಿ ನಿಮ್ಮ ಪಾರ್ಲಿಮೆಂಟರಿ ಜೀವನಕ್ಕೆ ಅದು ಅನುಕೂಲವಾಗಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಈ ವಿಷಯದ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ, ಈ ಸದನದಲ್ಲಿರುವವರಾಗಲಿ ಅಥವಾ ನನ್ನ ಕ್ಷೇತ್ರದ ಜನತೆಯಾಗಲಿ ನಿಮ್ಮ ಸ್ಥಾನವನ್ನು ಆ ರೀತಿ ಪ್ರಶ್ನಿಸುತ್ತೇನೆ ಎನ್ನುವಂಥ ಯಾವ ಒಂದು ಭಾವನೆಯನ್ನು ಹೊಂದಬಾರದು ಎಂಬುದು ನನ್ನ ಹೃದಯಾಂತರಾಳದ ಭಾವನೆಯಾಗಿದೆ. ಸ್ವಭಾತಃ ಕೆಲವು ಶಬ್ಧ ಅಥವಾ ವಾಕ್ಯಗಳನ್ನು ವ್ಯಕ್ತಪಡಿಸುವಾಗ ಸ್ವಲ್ಪ

ಕಠೋರತೆ ಬರಬಹುದು, ಕೆಲವು ನೈಸಿಟಿಸ್ ಅನ್ನು ರೂಢಿಸಿಕೊಳ್ಳಬೇಕಾದ ಅಗತ್ಯತೆ ಇನ್ನೂ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆದರೆ ನಾನು ಹಾಗೆ ಹೇಳಿದ್ದರಿಂದ ಮಾನ್ಯ ಸಭಾಧ್ಯಕ್ಷರ ಸ್ಥಾನದ ಮೇಲೆ ಅಗೌರವವಾಗಲಿ ಅಶ್ರದ್ಧೆಯಾಗಲಿ ಇದೆ ಎಂಬ ಭಾವನೆಗಳೆಲ್ಲ ಇಲ್ಲ ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ.

+ ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ಇಂಥ ವಿಶೇಷವಾದ ಬಿಲ್ಲನ್ನು ಇಲ್ಲಿ ಪ್ರೆಸೆಂಟ್ ಮಾಡುವ ಸಂದರ್ಭದಲ್ಲಿ ನಾನು ವಿಶೇಷವಾದ ಆಸಕ್ತಿ ಮತ್ತು ಕುತೂಹಲದಿಂದ ನೋಡುತ್ತಿದ್ದೇನೆ. ಏಕೆಂದರೆ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಇಂಥ ಬಿಲ್ಲನ್ನು ತರುವುದಕ್ಕೆ ಮೊದಲು ಇದಕ್ಕಿಂತ ಗಂಭೀರವಾದಂಥ ಅನೇಕ ವಿಷಯಗಳು, ಅಂಶಗಳು ಇದ್ದು ಅಂಥವುಗಳ ಬಗ್ಗೆ ಬಿಲ್ಲನ್ನು ತರಬೇಕಾಗಿತ್ತು. ಅವರು ನನ್ನ ಕ್ಷೇತ್ರಕ್ಕೆ ಸಂದರ್ಶನ ಮಾಡಿದಂಥ ಸಂದರ್ಭದಲ್ಲಿ ಅವರನ್ನು ನಾನು ಪದೇ ಪದೇ ವಿನಂತಿ ಮಾಡಿಕೊಂಡಿದ್ದೆ. 18 ಪರ್ಸೆಂಟ್ ಹಣದಲ್ಲಿ ಸುಮಾರು 32 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ ಕಟ್ಟಡವನ್ನು ಇವತ್ತು ಡೆಮಾಲಿಷ್ ಮಾಡುವಂಥ ಸ್ಥಿತಿಗೆ ಬಂದಿದೆ. ಇಂಥ ದುಸ್ಥಿತಿ ಬಂದಿರುವಂಥ ಸಂದರ್ಭದಲ್ಲಿ ಇವತ್ತು ಕಂಟ್ರಾಕ್ಟರ್ ಮೇಲಾಗಲಿ, ಸಂಬಂಧಪಟ್ಟ ಇಂಜಿನಿಯರ್ ಮೇಲಾಗಲೀ ಒಂದೇ ಒಂದು ಕಾನೂನಿನ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಇವರೆಲ್ಲರೂ ಆ ಹಣವನ್ನು ಶೇರ್ ಮಾಡಿಕೊಂಡಿದ್ದಾರೆ. ಇವರ ಮೇಲೆ ಯಾವುದೇ ರೀತಿಯ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲೂ ಇಲ್ಲ. ಈ ಬಗ್ಗೆ ಎನ್‌ಕ್ವೈಯರಿ ಆಗಿ ವರದಿ ಕೂಡ ಬಂತು. ಬಹುಶಃ 18 ಪರ್ಸೆಂಟ್ ಹಣದ ದುರುಪಯೋಗವನ್ನು ತಡೆಗಟ್ಟುವ ಬಗ್ಗೆ ಇಂಥ ಕಟ್ಟುನಿಟ್ಟಾದ ಬಿಲ್ಲನ್ನು ತಂದಿದ್ದರೆ ಅದು ಅತ್ಯುತ್ತಮವಾದ ಕೆಲಸವಾಗುತ್ತಿತ್ತು ಎಂದು ನನ್ನ ಅನಿಸಿಕೆಯನ್ನು ಬಹಳ ನೋವಿನಿಂದ ಹೇಳುತ್ತೇನೆ. ಈಗ ಸರ್ಕಾರ ತಂದಿರುವ ಬಿಲ್‌ನಲ್ಲಿ ವಿಶೇಷವಾಗಿ '5ಬಿ'ಗೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ. ಈ ಅಂಬೇಡ್ಕರ್ ಮನೆಗಳಿಗೆ ಸಂಬಂಧಪಟ್ಟ ಹಾಗೆ ವಿಶೇಷವಾಗಿ ನಗರ ಮಟ್ಟದಲ್ಲಿರುವಂಥ ನಮ್ಮ ಪರಿಶಿಷ್ಟ ಬಂಧುಗಳಿಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಈ ಕೂಲಿ ಕೆಲಸ ಮಾಡುವವರು ಸಮೇತ ಕನಿಷ್ಟ 50 ರೂಪಾಯಿಗಳ ವೇತನ ಪಡೆಯದೇ ಇದ್ದರೆ ಅವರ ಕುಟುಂಬವನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕ್ಲಾಜ್ '5ಬಿ'ಯಲ್ಲಿ ಜಾತಿಯ ಜೊತೆಗೆ ಆದಾಯ ಸರ್ಟಿಫಿಕೇಟ್ ಪಡೆದುಕೊಳ್ಳಬೇಕೆನ್ನುವುದರ ಬಗ್ಗೆ ಆಕ್ಷೇಪಣೆಯನ್ನು ಮಾಡುತ್ತಿದ್ದೇನೆ. ಕನಿಷ್ಟ ವರ್ಷಕ್ಕೆ 18 ಸಾವಿರ ರೂಪಾಯಿಗಳ ಸಂಪಾದನೆ ಕೂಲಿ ಕೆಲಸ ಮಾಡುವವರಿಗೆ ಆಗುವಾಗ ಯಾವುದೇ ಕಾರಣಕ್ಕೆ ಆದಾಯ ಸರ್ಟಿಫಿಕೇಟ್‌ನ್ನು ತಹಸೀಲ್ದಾರ್ ತಪ್ಪಾಗಿ ಕೊಟ್ಟುಬಿಟ್ಟರೆ, ಇದರ ಬಗ್ಗೆ ಮುಂದಿನ ದಿವಸಗಳಲ್ಲಿ ಪರಿಶೀಲನೆ ನಡೆಸಿದಾಗ ತನ್ನಿಂದ ತಪ್ಪಾಗಿರುತ್ತದೋ ಏನೋ ಎನ್ನುವ ಅನಿಸಿಕೆಯಿಂದ ಅದು ಉದ್ದೇಶಪೂರ್ವಕವಾಗಿ ಆಗದಿದ್ದರೂ ಕೂಡ ಅಂಥ ಒಂದು ಆದಾಯ ಪತ್ರದ ಆಧಾರದಲ್ಲಿ ಒಬ್ಬ ತಹಶೀಲ್ದಾರ್ ಎರಡು ವರ್ಷಗಳ ತನಕ

ಕಾರಾಗೃಹ ವಾಸ ಅನುಭವಿಸುವಂಥ ದುಸ್ಥಿತಿ ಬರುವಂತಿದ್ದರೆ ಈ ತಹಶೀಲ್ದಾರ್ ಆದಾಯ ಸರ್ಟಿಫಿಕೇಟ್‌ನ್ನು ಸುಮ್ಮನೆ ಕೊಡುತ್ತಾರೆಯೇ? ಇಂಥ ಮಹತ್ತರವಾದ ಅನೇಕ ಸಮಸ್ಯೆಗಳು ಈ 5ಬಿ ಕ್ಲಾಜ್‌ನಲ್ಲಿ ಇದೆ ಎನ್ನುವುದನ್ನು ಸ್ಪಷ್ಟಪಡಿಸಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಕ್ಲಾಜ್ 6ಇ ಗೆ ಸಂಬಂಧಪಟ್ಟ ಹಾಗೆ ಒಬ್ಬ ವ್ಯಕ್ತಿ ತನ್ನ ಸಾಮರ್ಥ್ಯದಿಂದ ಪದವಿ ಪಡೆದಿರುತ್ತಾನೆ. ಇದಕ್ಕೆ ಸಂಬಂಧಪಟ್ಟ ಸರ್ಟಿಫಿಕೇಟ್ ಯಾವುದಿದೆ, ಅವನನ್ನು ಶಾಲೆಗೆ ಸೇರಿಸುವ ಸಂದರ್ಭದಲ್ಲಿ ಅವನ ಹೆತ್ತವರು ಕೊಟ್ಟಿರಬಹುದು, ಆ ಸಂದರ್ಭದಲ್ಲಿ ಸಂಬಂಧಪಟ್ಟ ತಹಶೀಲ್ದಾರ್ ಕೂಡ ಕೊಟ್ಟಿರಬಹುದು. ಅಂಥ ಸಂದರ್ಭದಲ್ಲಿ ಅವರ ಪದವಿಯನ್ನೇ ರದ್ದತಿ ಮಾಡುತ್ತೇವೆನ್ನುವ ಬದಲು ಸರ್ಕಾರ ಕೆಲಸವನ್ನು ಕೊಟ್ಟಿದ್ದಲ್ಲಿ ಆ ಕೆಲಸದಿಂದ ಅವರನ್ನು ಹೊರಗೆ ಹಾಕುತ್ತೇವೆಂದು ಹೇಳಿದರೆ ಅದರಲ್ಲಿ ಅರ್ಥ ಇದೆ. ಆದರೆ ಜ್ಞಾನಾರ್ಜನೆಯಿಂದ ಪದವಿಯನ್ನು ಪಡೆದಿರತಕ್ಕಂಥಾದ್ದನ್ನು ರದ್ದು ಮಾಡುವಂಥ ಕಾನೂನನ್ನು ತಂದಿರುವಂಥಾದ್ದು ಸರ್ವಥಾ ಸಾಧುವಾದುದಲ್ಲ. ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕೆನ್ನುವ ವಿನಂತಿಯೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಇದೊಂದು ಸಣ್ಣ ತಿದ್ದುಪಡಿ ಆದರೂ ಸಹ ಇದರ ಮೇಲೆ ನಡೆದಂಥ ಚರ್ಚೆ ಅನೇಕ ರೀತಿಯಿಂದ ಬೆಳಕು ಚೆಲ್ಲಿದೆ. ಆಲೋಚನೆ ಮಾಡುವುದಕ್ಕೆ, ವಿಚಾರ ಮಾಡುವುದಕ್ಕೆ, ಮುಂದಿನ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ನನಗೆ ಸಹಾಯ ಆಗಿದೆ ಎಂದು ಮಾತ್ರ ನಾನು ಹೇಳುತ್ತೇನೆ. ಇಷ್ಟೆಲ್ಲಾ ಆದರೂ ನಮ್ಮ ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಸಿಂಧ್ಯಾರವರಿಗೆ ಇದರ ಅರ್ಥ ಆಗಿಲ್ಲ. ಅದು ನನ್ನ ದುರಾದೃಷ್ಟ ಎಂದು ಹೇಳಬೇಕಾಗುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಸೆಕ್ಷನ್ 6ಎಫ್‌ಗೆ ಓವರ್‌ರೈಡಿಂಗ್ ತಂದಿರುವುದು, ಇದು ನಾವು ನೋಡಿದ್ದರಲ್ಲಿ ಸರಿ ಇದೆ. ಆದರೂ ನೀವು ಮಾಡಿದ ಸಲಹೆಯನ್ನು ರಾಜ್ಯಾಂಗ ಬದ್ಧವಾಗಿ ಏನಾದರೂ ಲೋಪದೋಷಗಳು ಇದೆಯೇ ಎನ್ನುವುದನ್ನು ಪರೀಕ್ಷೆ ಮಾಡುತ್ತೇವೆ. ಏನಾದರೂ ಆ ರೀತಿಯ ತೊಂದರೆ ಇದ್ದರೆ ಅದನ್ನು ನಿವಾರಣೆ ಮಾಡುತ್ತೇವೆ. ಈ ಸ್ಟ್ರೀಮ್‌ಲೈನ್ ಮಾಡತಕ್ಕಂಥ ವಿಚಾರದಲ್ಲಿ ಅದನ್ನು ಮಾಡತಕ್ಕ ಅಗತ್ಯತೆ ಇದೆ ಎಂದು ಮಾನ್ಯ ಸೋಮಶೇಖರ್‌ರವರೂ ಕೂಡ ಹೇಳಿದ್ದಾರೆ. ಈ ಕ್ಲಾಜ್ 4ಇ ಯಲ್ಲಿ ಈ ಡಿಗ್ರಿ ಅಡ್ಮಿಷನ್ಸ್‌ಗೆ ಏನು ವಾಪಸ್ಸು ಪಡೆಯುವುದಕ್ಕಿದೆ ಇದು ಅಪಾಯಿಂಟ್‌ಮೆಂಟ್ಸ್‌ಗೂ ಅನ್ವಯಿಸುವ ಹಾಗೆ ತಿದ್ದುಪಡಿ ತರಬೇಕೆಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

SRI B.SOMASHEKAR: Cancellation of degree secured on the basis of false certificate and also "secured appointments" ಅದರ ಜೊತೆಗೆ ಎರಡು ಶಬ್ದ ಸೇರಿಸಿಬಿಟ್ಟರೆ ಸಾಕು.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ನಿಯಮಾವಳಿಯಲ್ಲಿ ನಾವು ಒಂದು ಹೊಸ ತಿದ್ದುಪಡಿ ಮಾಡಿ ನಿಯಮಾವಳಿ ತಂದಿದ್ದೇವೆ. ಈ ನಿಯಮಾವಳಿಯಲ್ಲಿ ಅಪಾಯಿಂಟ್‌ಮೆಂಟ್ಸ್ ಅಂಡ್ ಅಡ್ಮಿಷನ್ಸ್ ಎಂದು ಎರಡೂ ಇದೆ. ಅದನ್ನು ನಾನು ಸ್ವಲ್ಪ ನೋಡಬೇಕಾಗುತ್ತದೆ. ನಮ್ಮ ರೂಲ್ಸ್‌ನಲ್ಲಿ ಇದ್ದುದ್ದನ್ನು ಜಾರಿಗೆ ತರುವುದಕ್ಕೆ ಆತಂಕ ಆಗುವುದಾದರೆ ಖಂಡಿತವಾಗಿ ನಾವು ಆಕ್ಟ್‌ಗೆ ತಿದ್ದುಪಡಿ ತಂದೇ ತರುತ್ತೇವೆ. ಏಕೆಂದರೆ ನಮ್ಮ ಉದ್ದೇಶ ನೇರವಾಗಿ, ಸಾಧುವಾಗಿ ಇರಬೇಕಾದರೆ ಅದನ್ನು ಆಕ್ಟ್‌ನಲ್ಲಿ ತರುವುದಕ್ಕೆ ಅವಕಾಶವಿದೆ. ಆಕ್ಟ್‌ನಲ್ಲಿ ತರುತ್ತೇವೆ. ನಿಯಮಾವಳಿಗಂತೂ ಈಗ ತಂದಿದ್ದೇವೆ. ಆ ಭಯ ನಿಮಗೆ ಇರಬೇಕಾದಂಥ ಅಗತ್ಯವಿಲ್ಲ. 'ನಮ್ಮ ಶ್ರೀ ಮಲ್ಲಿಕಾರ್ಜುನ ಅವರು ಕ್ಲಾಜ್ 5 ಬಿ ಬಗ್ಗೆ ಮಾತನಾಡುತ್ತಾ ತಹಶೀಲ್ದಾರ್ ಉದ್ದೇಶಪೂರ್ವಕವಾಗಿ ಸರ್ಟಿಫಿಕೇಟ್ ಇಷ್ಯೂ ಮಾಡುತ್ತಾರೆ ಎಂದು ಹೇಳಿದ್ದಾರಲ್ಲಾ, ಈಗ ಇದೆ. ಈಗ ವಾಸ್ತವಿಕವಾಗಿ ನಾವು ಈ ತಿದ್ದುಪಡಿಯನ್ನು ತಂದಿರುವುದರಿಂದ ಅಧಿಕಾರಿಗಳು ಹೆದರತಕ್ಕಂಥ ಪರಿಸ್ಥಿತಿಗೆ ಬಂದಿದ್ದಾರೆ ಎನ್ನುವುದನ್ನು ಕೆಲವರು ಹೇಳಿದ್ದಾರೆ. ಆದರೆ ಸ್ವಲ್ಪ ಭಯ ಇರತಕ್ಕಂಥಾದ್ದನ್ನು ಮಾಡದೇ ಹೋದರೆ ಹಾಡುಹಗಲೇ ನೇರವಾಗಿ ಕೊಡುವುದು ತೆಗೆದುಕೊಳ್ಳುವುದು ಆಗಿದೆ. ನಾವು ಇಂಥ ಅನೇಕ ಪ್ರಕರಣಗಳನ್ನು ನೋಡಿದ್ದೇವೆ. ಎಲ್ಲವನ್ನೂ ನಾನು ಇಲ್ಲಿ ಬಿಚ್ಚಿ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಯಾರು ಸುಳ್ಳು ಜಾತಿ ಪತ್ರಕ್ಕಾಗಿ ಬರುತ್ತಾರೋ ಅವರಿಗೂ ಹೆದರಿಕೆ ಇರಬೇಕಾಗುತ್ತದೆ. ನನ್ನ ಮೇಲೆ ಕೂಡ ಶಿಸ್ತಿನ ಕ್ರಮ ಎಂದಾದರೂ ಬರಬಹುದೆನ್ನುವ ಭಯ ಇರುವುದು ತೀರಾ ಅವಶ್ಯಕತೆಯಿದೆ. ಆ ಒಂದು ಅವಕಾಶವನ್ನು ನಾವು ಕಲ್ಪಿಸಿಕೊಟ್ಟಿದ್ದೇವೆ. ನಮ್ಮ ಮಾನ್ಯ ಹೆಗ್ಡೆಯವರು ಮಾತನಾಡುತ್ತಾ ರಿಮ್ಯಾಂಡ್ ಮಾಡುವುದು ಬೇಡ ಅದು ಅಲ್ಲಿಗೆ ಮುಕ್ತಾಯವಾಗಲಿ ಎಂದು ಹೇಳಿದ್ದಾರೆ. ಆದರೆ ನ್ಯಾಚುರಲ್ ಜಸ್ಟೀಸ್ ಪ್ರಕಾರ ಅಕಾಸ್ಮತ್ತಾಗಿ ತಹಶೀಲ್ದಾರ್ ಮೇಲೆ ಅಥವಾ ಎ.ಸಿ. ಮೇಲೆ ಕೆಲವು ದಾಖಲೆಗಳನ್ನು, ಎವಿಡೆನ್ಸ್‌ಗಳನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡುವ ಅವಕಾಶವಿದ್ದರೆ ಬರಲಿ ಎನ್ನುವ ಕಾರಣಕ್ಕಾಗಿ ಈ ರಿಮ್ಯಾಂಡ್ ಮಾಡತಕ್ಕಂಥಾದ್ದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

SRI K.JAYAPRAKASH HEGDE: You have said! "The DC shall not pass any orders prejudicial to any person's interest unless such person is given an opportunity." When you are giving an opportunity before the DC, why should it go back? Let him hear the person. The whole purpose will be defeated. ಸುಮ್ಮನೆ ಸಮಯ ವ್ಯಯವಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಟೈಮ್ ಲಿಮಿಟ್ಸ್ ಹಾಕಬೇಕು. ಇಲ್ಲದಿದ್ದರೆ ಬಹಳ ಹೆರ್‍ಯಾಸ್‌ಮೆಂಟ್ ಆಗುತ್ತದೆ. ಕ್ಯಾಸ್ಟ್ ಸರ್ಟಿಫಿಕೇಟ್ ಇಶ್ಯೂ

ಮಾಡುವಂಥಾದ್ದರಲ್ಲಿ ಇರಬಹುದು,.....

ಶ್ರೀ ಕಾಗೋಡು ತಿಮ್ಮಪ್ಪ: ಈಗಾಗಲೇ ಕ್ಯಾಸ್ಟ್ ಸರ್ಟಿಫಿಕೇಟನ್ನು 30 ದಿವಸಗಳ ಒಳಗೆ ತಹಸೀಲ್ದಾರ್ ಕೊಡಬೇಕು ಎಂದು ಟೈಮ್ ಲಿಮಿಟ್ ಇದೆ.

ಶ್ರೀ ಬಿ.ಸೋಮಶೇಖರ್: ಆಕ್ಟ್‌ನಲ್ಲಿ ಎಲ್ಲಿದೆ?

ಶ್ರೀ ಕಾಗೋಡು ತಿಮ್ಮಪ್ಪ: ಅದನ್ನು ರೂಲ್ಸ್‌ನಲ್ಲಿ ಮಾಡಿದ್ದೇವೆ.

ಶ್ರೀ ಬಿ.ಸೋಮಶೇಖರ್: ಶ್ರೀ ತಿಮ್ಮಪ್ಪನವರೆ, ಆಕ್ಟ್‌ನಲ್ಲಿ ಎರಡು ವಿಚಾರಗಳನ್ನು ತಂದುಬಿಟ್ಟರೆ ನಾವು ಇದಕ್ಕೆ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಅದೇನೆಂದರೆ "secured admission in the educational institution and also secured job on the basis of false certificate," ಎಂದು ಎರಡು ವಾಕ್ಯ ಮತ್ತು ಟೈಮ್ ಲಿಮಿಟ್‌ನ್ನು ಮಾಡಿದರೆ ನಾವು ಈ ಬಿಲ್‌ಗೆ ಒಪ್ಪಿಗೆ ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ರೂಲ್ಸ್‌ನಲ್ಲಿ ಅದನ್ನು ನಾವು ಈಗ ಅಳವಡಿಸಿಕೊಂಡಿದ್ದೇವೆ.

ಶ್ರೀ ಬಿ.ಸೋಮಶೇಖರ್: ಇಲ್ಲದಿದ್ದರೆ ನಮ್ಮ ಶ್ರೀ ಮಲ್ಲಿಕಾರ್ಜುನ ಅವರು ಹೇಳಿದ ಹಾಗೆ ಡಿಗ್ರಿ ಸರ್ಟಿಫಿಕೇಟ್‌ನ್ನು ನೀವು ಕ್ಯಾನ್ಸಲ್ ಮಾಡದಿದ್ದರೂ "secured appointment based on the false certificate" ಅದನ್ನು ಸೇರಿಸಬೇಕು. ಏಕೆಂದರೆ ಅವರು ಹೇಳುವುದರಲ್ಲಿ ಅರ್ಥ ಇದೆ. ತಾತ್ವಿಕವಾಗಿ ಡಿಗ್ರಿಯನ್ನು ಅವನು ತನ್ನ ಸ್ವಂತ ಎಫರ್ಟ್ಸ್‌ನಿಂದ ಪಾಸ್ ಮಾಡುತ್ತಾನೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಡಿಗ್ರಿ ಮಾಡುತ್ತಾರೆ, ಬೇರೆ ಜನರಲ್ ಕ್ಯಾಟಗರಿಯವರೂ ಸಹ ಡಿಗ್ರಿ ಮಾಡುತ್ತಾರೆ. ಆ ಡಿಗ್ರಿಯನ್ನು ರದ್ದು ಮಾಡುವಂಥಾದ್ದು ಏನಿದೆ ಅದು ತಾತ್ವಿಕವಾಗಿ ತಪ್ಪು ಕ್ರಮ. ಬೇಕಾದರೆ ಅವನು ಸುಳ್ಳು ಜಾತಿ ಪ್ರಮಾಣ ಪತ್ರ ತೆಗೆದುಕೊಂಡಿದ್ದರೆ ಆ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ ಸರ್ಕಾರದಿಂದ ಪಡೆದುಕೊಂಡಿದ್ದರೆ ಆ ಅಪಾಯಿಂಟ್‌ಮೆಂಟ್‌ನ್ನು ರದ್ದು ಮಾಡಿ.

SRI K.JAYAPRAKASH HEGDE: If he is not entitled to that seat without that reservation, how can he get that seat? ಈಗ ಮೆಡಿಕಲ್ ಕಾಲೇಜಿಗೆ ಅವನು ಎಸ್.ಸಿ.ಸರ್ಟಿಫಿಕೇಟ್ ತೆಗೆದುಕೊಂಡಾಗ ಮಾತ್ರ ಸೀಟ್ ಸಿಗುವುದಾದರೆ, if he is not entitled to medical or engineering seat. ನೀವು ಆ ಕ್ಲಾಸ್ ಇಟ್ಟಾಗ ಅವರ ಪೇರೆಂಟ್ಸ್ ಹೆದರುತ್ತಾರೆ. ನಮ್ಮ ಮಕ್ಕಳಿಗೆ ಎಲ್ಲಾದರೂ ಮುಂದೆ ಸೀಟು ಕ್ಯಾನ್ಸಲ್ ಆಗುತ್ತದೆ, ಅವನ ಡಿಗ್ರಿ ರದ್ದು ಆಗುತ್ತದೆ

ಎಂದಾಗ ಮಾತ್ರ ಯಾರೂ ಸೇರಿಸುವುದಕ್ಕೆ ಹೋಗುವುದಿಲ್ಲ. It should be punishable. ಇಲ್ಲದಿದ್ದರೆ ಡಿಗ್ರಿ ಸಿಗುತ್ತದೆಂದು ಎಲ್ಲರೂ ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಸೇರಿಸಿ ಬಿಟ್ಟರೆ ನಂತರ ಕೊನೆಯಲ್ಲಿ ಗೊತ್ತಾದಾಗ ತಾನು ಪಡೆದ ಪದವಿ ರದ್ದು ಆಗುವುದಿಲ್ಲವೆಂದಾದಾಗ probably there is every possibility of misusing this Act.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ನಿಯಮಾವಳಿಯಲ್ಲಿ ಅದನ್ನು ಅಳವಡಿಸಿಕೊಂಡಿದ್ದರಿಂದ ಇದರಲ್ಲಿ ಇಲ್ಲ. ಲೀಗಲ್ ಆಗಿ ನಮ್ಮ ಹ್ಯಾಂಡ್ಸ್ ಇನ್ನೂ ಸ್ಟ್ರಂಗ್ತನ್ ಆಗುವುದಾದರೆ I am prepared to examine in details and take appropriate action at appropriate time. ಈಗ ಇರುವುದು ಸಾಕಾಗುತ್ತದೆಂದು ನನ್ನ ಅಭಿಪ್ರಾಯ. ನಿಮಗೆ ಏನು ಕಳಕಳಿ ಇದೆ ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಏನಾದರೂ ನಮ್ಮ ನಡವಳಿಕೆಯಲ್ಲಿ ಅಸಾಧ್ಯ ಎಂದು ಕಂಡುಬಂದರೆ ಖಂಡಿತವಾಗಿ ಅದರ ಬಗ್ಗೆ ಪರಾಮರ್ಶೆ ಮಾಡುತ್ತೇನೆ. ಇನ್ನು ಶ್ರೀ ಹೆಗ್ಡೆಯವರಿಗೆ ಹೇಳುವುದಾದರೆ, ರೆಮಿಟೆನ್ಸ್ ಬೇಕಾಗುತ್ತದೆ. ಏಕೆಂದರೆ ನಾವೆಲ್ಲಾ ಲಾಯರ್ ಆಗಿದ್ದವರು. ಅಲ್ಲಿ ಇರತಕ್ಕಂಥ ಎವಿಡೆನ್ಸ್, ಮೆಟೀರಿಯಲ್ಸ್ ಸಾಕಾಗದಿದ್ದರೆ ತಹಶೀಲ್ದಾರ್ ಸರ್ಟಿಫಿಕೇಟ್‌ನ್ನು ಇಷ್ಯೂ ಮಾಡತಕ್ಕಂಥ ಅಥಾರಿಟಿ ಆಗಿದ್ದಾರೆ. ಆ ಅಥಾರಿಟಿಗೆ ಅವಕಾಶ ಕೊಡುವ ದೃಷ್ಟಿಯಿಂದ ಈ ಆಸ್‌ಪೆಕ್ಟ್‌ನಲ್ಲಿ ಎಗ್ಜಾಮಿನ್ ಮಾಡಿ ನೀವು ಪರಿಶೀಲನೆ ಮಾಡಿ ಎಂದು ಹೇಳಿಕೊಟ್ಟರೆ ಇನ್ನಷ್ಟು ಪೂರಕವಾಗಿರುತ್ತದೆ. ಆದ್ದರಿಂದ ಇದರಲ್ಲಿ ಏನೂ ತಪ್ಪಾಗಲಿಕ್ಕಿಲ್ಲ. ಬೇಕಾದರೆ ಸ್ಟ್ರೀಮ್‌ಲೈನ್ ಮಾಡುವ ತನಕ ಪ್ರತಿಯೊಂದು ಕೇಸನ್ನೂ ಟೈಮ್‌ಬೌಂಡ್ ಹಾಕಿಕೊಂಡು ಡಿಸ್‌ಪೋಸ್ ಮಾಡಲೇಬೇಕೆಂದು ಹಾಕಿ ಮಾಡಿಯೇ ಮಾಡುತ್ತೇನೆ. ಇನ್ನು ನಮ್ಮ ಮಾನ್ಯ ಹಿರಿಯ ಸದಸ್ಯರು, ಅನುಭವಿಗಳಾದಂಥ ಶ್ರೀ ಸಿಂಧ್ಯಾರವರು ಅಪರೂಪವಾದ ವ್ಯಾಖ್ಯಾನವನ್ನು ಮಾಡಿ ಈ ಸದನಕ್ಕೆ ಬೆಳಕನ್ನು ಚೆಲ್ಲಿದ್ದಾರೆ, ಸಂತೋಷ. ನನಗೆ ಗೀಳು ಇಲ್ಲ. ನಾನು ತಿದ್ದುಪಡಿ ತಂದಿರತಕ್ಕಂಥಾದ್ದು ಸಾಮಾಜಿಕ ನ್ಯಾಯಕ್ಕೆ ನನ್ನ ಹೃದಯಾಂತರಾಳದಿಂದ ಹೊರ ಬಂದ ನುಡಿಗಳಿಂದ ತಂದಿದ್ದೇನೆ. ಏನ: ಗೀಳಲ್ಲ, ಪ್ರಚಾರಕ್ಕೂ ಅಲ್ಲ, ಹೊಗಳಿಕೆಗೂ ಅಲ್ಲ. ಏಕೆಂದರೆ ನಮ್ಮ ಸರ್ಕಾರ ಅದಕ್ಕೆ ಬದ್ಧವಾಗಿದೆ. ಈ ಮೀಸಲಾತಿಯನ್ನು ತಂದಿರುವ ಉದ್ದೇಶವೇ ಸಾಮಾಜಿಕ ನ್ಯಾಯವನ್ನು ತಂದುಕೊಡುವ ಕಾರಣಕ್ಕಾಗಿ. ಯಾವ ವರ್ಗಕ್ಕೆ ಮೀಸಲಾತಿಯನ್ನು ನಾವು ಕೊಟ್ಟಿದ್ದೇವೋ ಆ ವರ್ಗಕ್ಕೆ ಆ ಮೀಸಲಾತಿ ದಕ್ಕಬೇಕು ಎನ್ನುವ ಕಾರಣಕ್ಕೆ ಜಾತಿಯ ಸರ್ಟಿಫಿಕೇಟನ್ನು ಕೊಡಲೇ ಬೇಕಾಗುತ್ತದೆ. ಹಾಗೆ ಕೊಡುವಾಗ ಮತ್ತು ಅದನ್ನು ಪಡೆಯುವಾಗ ಜವಾಬ್ದಾರಿಕೆಯಿಂದ ಆ ಕೆಲಸವನ್ನು ಮಾಡಬೇಕಾಗುತ್ತದೆ. ಕಾರಣ ಏನೆಂದರೆ ಯಾವ ಜನರಿಗೆ ಒಳ್ಳೆಯ ಉದ್ದೇಶ ಇಟ್ಟುಕೊಂಡು ಸವಲತ್ತನ್ನು ನೀಡಬೇಕಾಗಿದೆಯೋ ಅದು ಆ ಜನರಿಗೆ ಮುಟ್ಟಬೇಕೆನ್ನುವಂಥ ಏಕೈಕ ಕಾರಣದಿಂದ ಮಾಡಬೇಕಾಗಿದೆ. ಆದ್ದರಿಂದ

5 ವರ್ಷಗಳ ಆಡಳಿತ ಮಾಡಿದ್ದೀರಲ್ಲಾ, ನಿಜ. ಯಾರು ಇದನ್ನು ನೋಡಬೇಕು, ಯಾರು ಇದನ್ನು ಪರಿವೀಕ್ಷಣೆ ಮಾಡಬೇಕು. ಮಂತ್ರಿಯಾದವರೆಲ್ಲಾ ಎಲ್ಲಾ ಕಚೇರಿಗಳಿಗೆ ಹೋಗಿ ಎಲ್ಲಾ ನೋಡಿಕೊಂಡು ಬಂದು ಪರೀಕ್ಷೆ ಮಾಡಿ ಸರ್ಟಿಫಿಕೇಟ್ ಮಾಡಿಕೊಡುವಂಥ ವ್ಯವಸ್ಥೆ ಇಟ್ಟುಕೊಂಡಿದ್ದರೆ ಆಡಳಿತವನ್ನು ಬಹಳ ಚೆನ್ನಾಗಿ ನಡೆಸುತ್ತೇವೆ. ಅದಕ್ಕೆ ಒಂದು ವ್ಯವಸ್ಥೆ ಇದೆ. ಯಾರ್ಯಾರು ಏನೇನು ಮಾಡಬೇಕೆಂಬ ಒಂದು ಜವಾಬ್ದಾರಿ ಇದೆ. ಯಾರು ಜವಾಬ್ದಾರಿಯನ್ನು ನಿರ್ವಹಿಸುವುದಿಲ್ಲ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶಗಳಿವೆ. ಆದ್ದರಿಂದ ಐದು ವರ್ಷಗಳ ಅವಧಿ ಯಲ್ಲಿ ಇನ್ಸ್‌ಪೆಕ್ಷನ್ ಅಥಾರಿಟಿಯನ್ನು ನೇಮಕ ಮಾಡುವುದಕ್ಕೆ, ಕಾನೂನು ಮಾಡುವುದಕ್ಕೆ ಅವಕಾಶವಿದೆ. ತಮ್ಮ ಸರ್ಕಾರ ಐದು ವರ್ಷಗಳ ಕಾಲ ಆಡಳಿತ ಮಾಡಿದ್ದಾಗ ಆ ಇನ್ಸ್‌ಪೆಕ್ಷನ್ ಅಥಾರಿಟಿಯನ್ನು ಯಾರು ಮಾಡಬೇಕೆನ್ನತಕ್ಕಂಥ ನಿಯಮಾವಳಿಗೆ ತಿದ್ದುಪಡಿ ಮಾಡತಕ್ಕಂಥ ಕೆಲಸವನ್ನು ಮಾಡಿದ್ದೀರಾ? ಇದನ್ನು ಮಾಡಿ ನಂತರ ಸಾಮಾಜಿಕ ನ್ಯಾಯದ ವಿಚಾರದಲ್ಲಿ ಹೇಳಿದ್ದರೆ ನಾನು ಇವತ್ತು ಒಪ್ಪುತ್ತಿದ್ದೆ. ಯಾರ ಪರವಾಗಿ ವಾದ ಮಾಡುತ್ತೀರಿ, ಯಾರ ಪರವಾಗಿ ವಕಾಲತ್ತು ಹಾಕುತ್ತೀರೆಂಬುದು ಅರ್ಥವಾಯಿತು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸಾಮಾಜಿಕ ನ್ಯಾಯದ ಮೇಲಿನ ಕಳಕಳಿ ಬಗ್ಗೆ ನಿಮ್ಮಿಂದ ನಾನು ಪಾಠ ಕಲಿಯಬೇಕಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮಿಂದಲೂ ನಾನು ಪಾಠ ಕಲಿಯಬೇಕಾಗಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಕ್ಲಾರಿಫಿಕೇಷನ್ ಕೇಳಿದೆ ಅಷ್ಟೆ. ಕರಪ್ಷನ್ ಜಾಸ್ತಿ ಆಗುತ್ತದೆ, ಅಧಿಕಾರಿಗಳು ಮಿಸ್‌ಯೂಸ್ ಮಾಡುತ್ತಾರೆ, ಕರಪ್ಷನ್ ಎರಡರಷ್ಟು, ಮೂರರಷ್ಟು ಆಗುತ್ತದೆ ಅದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ, ಇನ್‌ಕಂ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ, ಕೊಡುವುದಕ್ಕೆ ಪ್ರೊಸೀಜರ್ ಯಾವುದೂ ಸರಿಯಾಗಿಲ್ಲ, ಅದನ್ನು ಫಾರ್ಮ್ಯುಲೇಟ್ ಮಾಡಿ ಎಂದು ನಾನು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಆದ್ದರಿಂದ ಈ ಕಾನೂನಿನ ಅಗತ್ಯ ಇದೆ. ಇವತ್ತು ಈ ಕಾನೂನಿನ ಅಗತ್ಯ ಇರುವುದರಿಂದ ಕೆಲವು ತಿದ್ದುಪಡಿಗಳನ್ನು ತರಬೇಕಾದಂಥ ಅಗತ್ಯ ಇದೆ. ಆ ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗಳೇನಿವೆ ಅದನ್ನು ಖಂಡಿತವಾಗಿ ನಾನು ಪರಿಶೀಲನೆ ಮಾಡುತ್ತೇನೆ. ಅಗತ್ಯ ಬಂದರೆ ಈ ಕಾನೂನಿಗೆ ಇನ್ನೂ ಹೆಚ್ಚು ತಿದ್ದುಪಡಿ ಎಂದು ಇನ್ನಷ್ಟು ಸಕ್ರಿಯವಾಗಿ ಕಾರ್ಯರೂಪಕ್ಕೆ ಬರುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆಂದು ಹೇಳಿ ಇದಕ್ಕೆ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಈ ಇನ್‌ಕಂ ಸರ್ಟಿಫಿಕೇಟ್ ಕೊಡತಕ್ಕಂಥ ವಿಚಾರದಲ್ಲಿ ಯಾವ ರೀತಿ ಅಪಹಾಸ್ಯಕ್ಕೀಡಾಗಿದೆ. ಈ ಸರ್ಟಿಫಿಕೇಟ್ ಎನ್ನುವುದರ ಬಗ್ಗೆ ಮಾನ್ಯ ಎಲ್ಲಾ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಇವರು ಏನೂ ಉತ್ತರ ಕೊಡುವುದಿಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಹಿಂದುಳಿದ ವರ್ಗದವರಿಗೆ ನಾವು ಕ್ರೀಮಿ ಲೇಯರ್(ಕೆನೆ ಪದರ) ಅನ್ನು ಇಟ್ಟುಕೊಂಡಿದ್ದೇವೆ. ಅಲ್ಲಿ ಇನ್‌ಕಂ ಸರ್ಟಿಫಿಕೇಟ್‌ನ್ನು ಕೊಡಲೇ ಬೇಕಾಗುತ್ತದೆ. ನಾವು ನೇಮಕ ಮಾಡಿಕೊಳ್ಳುವಾಗ, ಅಡ್ಮಿಷನ್ ಮಾಡಿಕೊಳ್ಳುವಾಗ ಆ ಕೆನೆ ಪದರದ ಅಡಿಯಲ್ಲಿಯೇ ನಾವೆಲ್ಲಾ ತೂರಿ ಬರಬೇಕಾಗುತ್ತದೆ. ಆದ್ದರಿಂದ ಆದಾಯ ಸರ್ಟಿಫಿಕೇಟ್‌ನ್ನು ಪಡೆಯಲೇ ಬೇಕಾಗುತ್ತದೆ. ನಿಜ. ತಪ್ಪಾಗಿರಬಹುದು, ತಪ್ಪಾಗುತ್ತವೆ. ಮನುಷ್ಯ ತಪ್ಪು ಮಾಡದೆ ಇನ್ನಾವುದು ಮಾಡುತ್ತದೆ? ಆ ತಪ್ಪನ್ನು ಸರಿಪಡಿಸಿಕೊಂಡು ಹೋಗಬೇಕೆನ್ನುವ ಕಾರಣಕ್ಕಾಗಿ ಈ ಕಾನೂನಿನಡಿಯಲ್ಲಿ ಬಿಗಿ ವ್ಯವಸ್ಥೆಯನ್ನು ತಂದಿರತಕ್ಕಂಥಾದ್ದು ಆಗಿದೆ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಪದವಿಯನ್ನು ರದ್ದು ಮಾಡುವುದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಪದವಿಯನ್ನು ರದ್ದು ಮಾಡುವ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಹೆಗ್ಡೆಯವರು ಹೇಳಿದ ಹಾಗೆ ಮೀಸಲಾತಿಯ ಲಾಭ ತೆಗೆದುಕೊಂಡು ಅವನು ಎಂ.ಬಿ.ಬಿ.ಎಸ್. ಪಾಸ್ ಮಾಡಿದ್ದರೆ, ಅದಕ್ಕಾಗಿ ಕೆಲಸಕ್ಕೆ ಸೇರಿದ್ದರೆ, ಪದವಿಯನ್ನು ರದ್ದು ಮಾಡದೇ ಇದ್ದರೆ ಅವನು ಡಾಕ್ಟರ್ ಆಗಿ ಮುಂದುವರಿಯುತ್ತಾನೆ. ಅಂಥಾದ್ದನ್ನು ತಡೆಯುವುದಕ್ಕಾಗಿಯೇ ಈ ಬಿಲ್‌ನ್ನು ತಂದಿರುವಂಥಾದ್ದು. ಪದವಿಯನ್ನು ರದ್ದು ಮಾಡಿದ ಮೇಲೆ ಅವನು ಪ್ರೊಫೆಷನ್‌ನನ್ನು ಕಂಟಿನ್ಯೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಪದವಿಯನ್ನು ರದ್ದು ಮಾಡುವವರು ಯಾರು? ಕೆಲಸವನ್ನು ರದ್ದು ಮಾಡಲಿಕ್ಕೆ ಸರ್ಕಾರಕ್ಕೆ ಅಧಿಕಾರ ಉಂಟು. ಪದವಿಯನ್ನು ರದ್ದು ಮಾಡುವುದಕ್ಕೆ ಸರ್ಕಾರಕ್ಕೆ ಯಾವ ಅಧಿಕಾರ ಇದೆ? ಇದನ್ನು ಯೂನಿವರ್ಸಿಟಿಗಳು ಮಾಡಬೇಕಾಗುತ್ತದೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''2001ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೪ ರವರೆಗೆ

ಅಧ್ಯಕ್ಷರು: ''ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 2001ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''2001ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು

ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕ, ೨೦೦೧

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 2001ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999ರ ಕೆಲವು ಪ್ರಕರಣಗಳಲ್ಲಿ ಇರುವಂಥ ನ್ಯೂನತೆಗಳನ್ನು ಸರಿಪಡಿಸುವುದಕ್ಕಾಗಿ ಕೆಲವು ಉಪಬಂಧಗಳನ್ನು ಸೇರಿಸಿ ಸುಧಾರಣಾ ತಿದ್ದುಪಡಿ ಕಾಯಿದೆಯನ್ನು ಈ ಸದನದ ಮುಂದಿಟ್ಟಿದ್ದೇವೆ. ಮುಖ್ಯವಾಗಿ ರಾಜ್ಯಸರ್ಕಾರಕ್ಕೆ ವಿದ್ಯುಚ್ಛಕ್ತಿ ಆಯೋಗ ಏನು ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆ, ಆ ತೀರ್ಮಾನಕ್ಕನುಗುಣವಾಗಿ ಅದಕ್ಕಿಂತ ಮೊದಲು ರಾಜ್ಯಸರ್ಕಾರಕ್ಕೆ ನೀತಿ ನಿರೂಪಣೆ ಮಾಡುವುದನ್ನು ಈ ಕೆ.ಪಿ.ಟಿ.ಸಿ.ಎಲ್. ಆಗಲಿ ಅಥವಾ ಕೆ.ಇ.ಆರ್. ಆಗಲಿ ನೀತಿ ನಿರೂಪಣೆ ಮಾಡತಕ್ಕಂಥ ಅಧಿಕಾರ ಮತ್ತು ಜವಾಬ್ದಾರಿ ಸರ್ಕಾರಕ್ಕೆ ಇದೆ.

೫.೧೦ ಪಿ.ಎಂ

ಆ ಜವಾಬ್ದಾರಿಯನ್ನು ನಿಭಾಯಿಸುವ ರೀತಿ ಏನು ಇದೆ, ಯಾವುದಾದರೂ ಅನುದಾನ ಕೊಡಬೇಕು ಸಬ್ಸಿಡಿ ಕೊಡಬೇಕು, ಉದಾಹರಣೆಗೆ ರೈತರಿಗೆ ರಿಯಾಯಿತಿ ಕೊಡುವ ಸಂದರ್ಭ ಬಂದಾಗಲೆಲ್ಲಾ ಸರ್ಕಾರ ಅಂತಹ ಗ್ರಾಹಕರಿಗೆ, ನಿರ್ದಿಷ್ಟಪಡಿಸಿದ ರೀತಿಯಲ್ಲಿ ಗ್ರಾಹಕ ಅಥವಾ ಸಮೂಹ ಗ್ರಾಹಕರಿಗೆ, ರಾಜ್ಯ ಸರ್ಕಾರ ಪ್ರಕಟಿಸಿರತಕ್ಕ ನೀತಿಯನ್ನು ಅನುಷ್ಠಾನಗೊಳಿಸಬೇಕಾದರೆ, ಅದಕ್ಕೆ ಸಂದಾಯವಾಗತಕ್ಕಂಥ ವೆಚ್ಚವಾಗತಕ್ಕ ಮೊಬಲಗನ್ನು ಮತ್ತು ಇರುವ ನಿಬಂಧನೆಗಳನ್ನು ಯಾವ ಸಮಯದೊಳಗೆ ತೀರ್ಮಾನ ಮಾಡಬೇಕೋ ಆ ಸಮಯದೊಳಗೆ ತೀರ್ಮಾನ